# ವೃತ್ತಿರಂಗಭೂಮಿ ಪರಂಪರೆ ಮತ್ತು ಗದಗ ಪರಿಸರದ ವೃತ್ತಿರಂಗಭೂಮಿ ಕಲಾವಿದೆಯರು

**ಗುರುಪಾದವ್ವ ಫ. ಕಾಯಕದ***

**DOI: https://doi.org/10.5281/zenodo.21438208**

**ABSTRACT**

ಭಾರತೀಯ ರಂಗಭೂಮಿಯು ಸುಮಾರು 2500 ವರ್ಷಗಳ ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ಗ್ರೀಕ್ ರಂಗಭೂಮಿಯಂತೆಯೇ ಧಾರ್ಮಿಕ ಆಚರಣೆಗಳಿಂದ ಬೆಳೆದು, ಇಂದು ವೃತ್ತಿಪರ ಹಾಗೂ ಮನರಂಜನಾ ಕಲೆಯಾಗಿ ವಿಕಸನಗೊಂಡಿದೆ. ಕನ್ನಡ ರಂಗಭೂಮಿಯು ಯಕ್ಷಗಾನ, ಬಯಲಾಟ, ಹಾಗೂ ಕಂಪನಿ ನಾಟಕಗಳ ಮೂಲಕ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ನಿರ್ಮಿಸಿದೆ. ಶಾಂತಕವಿಯವರ ಪ್ರಭಾವದಿಂದ ಉತ್ತರ ಕರ್ನಾಟಕದಲ್ಲಿ ವೃತ್ತಿರಂಗಭೂಮಿಯು ಹೊಸ ದಿಕ್ಕನ್ನು ಪಡೆದುಕೊಂಡಿತು. ಪುರುಷಪ್ರಧಾನ ಸಮಾಜದಲ್ಲಿ ಅನೇಕ ಅಡೆತಡೆಗಳು, ಕಟ್ಟುಪಾಡುಗಳು ಮತ್ತು ಕಡುಬಡತನವನ್ನು ಎದುರಿಸಿಯೂ ಮಹಿಳೆಯರು ರಂಗಭೂಮಿಗೆ ಪ್ರವೇಶಿಸಿ ದಿಟ್ಟ ಹೆಜ್ಜೆಗಳನ್ನಿಟ್ಟರು. ವಿಶೇಷವಾಗಿ ಗದಗ ಪರಿಸರದ ಶಹಪೂರಪೇಟೆಯ ಕಲಾವಿದೆಯರಾದ ಸುಶೀಲಾ ಹಿರೇಮಠ, ಉಮಾದೇವಿ ಹಿರೇಮಠ, ಗಾಯತ್ರಿ ಹಿರೇಮಠ ಮತ್ತು ಮಂಜುಳಾ ಹಿರೇಮಠ ಮುಂತಾದವರು ಅನೇಕ ಪಾತ್ರಗಳಿಗೆ ಜೀವ ತುಂಬುವ ಮೂಲಕ ರಂಗಭೂಮಿಗೆ ನೀಡಿದ ಅದ್ವಿತೀಯ ಕೊಡುಗೆ ಮತ್ತು ಅವರ ಬದುಕಿನ ವಾಸ್ತವಿಕ ಚಿತ್ರಣವನ್ನು ಈ ಲೇಖನವು ಕಟ್ಟಿಕೊಡುತ್ತದೆ. ರಂಗಭೂಮಿಯ ಏಳಿಗೆ ಹಾಗೂ ಕಲಾವಿದರ ಸಂಕಷ್ಟಗಳ ನಿವಾರಣೆಗೆ ಪ್ರೇಕ್ಷಕರ ಪ್ರೋತ್ಸಾಹದ ಅಗತ್ಯವನ್ನು ಇದು ಒತ್ತಿಹೇಳುತ್ತದೆ.

**KEYWORDS:** ವೃತ್ತಿರಂಗಭೂಮಿ, ಕನ್ನಡ ರಂಗಭೂಮಿ, ಗದಗ ಪರಿಸರ, ಮಹಿಳಾ ಕಲಾವಿದರು, ನಾಟಕ ಕಂಪನಿಗಳು.

* **ಗುರುಪಾದವ್ವ ಫ. ಕಾಯಕದ,** ಪಿ.ಎಚ್.ಡಿ., ಸಂಶೋಧನಾ ವಿದ್ಯಾರ್ಥಿ, ಡಾ. ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರ, ಗದಗ.

ಪಾಶ್ಚಿಮಾತ್ಯರ ಸಂಪರ್ಕದಿಂದಾಗಿ ಭಾರತೀಯರಲ್ಲಿ ಒಂದು ಹೊಸಬಗೆಯ ಅರಿವು ಉಂಟಾಗಿ ವೃತ್ತಿರಂಗಭೂಮಿ ಸ್ಥಾಪನೆಗೆ ಪ್ರಚೋದನೆ ಸಿಕ್ಕು 150 ವರ್ಷಗಳು ಆಗಿರಬಹುದು. ಕಾಲಾಂತರದಲ್ಲಿ ಕಲೆಯನ್ನು ಕಾಯಕವನ್ನಾಗಿ ಮಾಡಿಕೊಂಡದ್ದರ ಪರಿಣಾಮ ವೃತ್ತಿರಂಗಭೂಮಿ ಬೆಳೆದುಬರಲು ಕಾರಣವಾಯಿತು. ರಂಗಭೂಮಿ 1775–76ರಲ್ಲಿ ಮೊದಲಿಗೆ ಕೋಲ್ಕತಾದಲ್ಲಿ ಪ್ರಾರಂಭವಾಯಿತು. ಮುಂದೆ 1842 ರ ಹೊತ್ತಿಗೆ ಮುಂಬೈಯಲ್ಲಿ ರಂಗಶಾಲೆಗಳನ್ನು ನಿರ್ಮಿಸಿ ಅವುಗಳನ್ನು ಬಾಡಿಗೆಗೆ ಕೊಡುವ ವ್ಯವಸ್ಥೆ ಪ್ರಾರಂಭವಾಯಿತು. ಭಾರತದಲ್ಲಿ ಪಾಶ್ಚಿಮಾತ್ಯರ ಪ್ರಭಾವವು ಒಂದೇ ಕ್ಷೇತ್ರಕ್ಕೆ ಸೀಮಿತವಾಗದೆ, ಅದು ಪ್ರತಿಯೊಂದು ಕ್ಷೇತ್ರದಲ್ಲಿಯೂ ತನ್ನ ಛಾಪನ್ನು ಮೂಡಿಸಿದೆ, ಅದೇ ರೀತಿಯಾಗಿ ಭಾರತದ ರಂಗಭೂಮಿಯ ಮೇಲೂ ತನ್ನ ಪ್ರಭಾವವನ್ನು ಬೀರಿದ್ದರಿಂದ ರಂಗಭೂಮಿ ಕ್ಷೇತ್ರದಲ್ಲಿ ಬದಲಾವಣೆ ಮತ್ತು ಪರಿಣಾಮಗಳು ಉಂಟಾಗಿವೆ. ವೃತ್ತಿ ರಂಗಭೂಮಿಯು ಜನಸಾಮಾನ್ಯರ ಮನರಂಜನೆಗಾಗಿ ವಿಕಾಸ ಹೊಂದಿದೆ ಎಂದು ಹೇಳಬಹುದಾಗಿದೆ.

ಭಾರತದ ರಂಗಭೂಮಿಯ ಆಧುನಿಕ ಇತಿಹಾಸದಲ್ಲಿ ಮೊಟ್ಟಮೊದಲಿಗೆ ಬಂಗಾಳದ ನೆಲದಲ್ಲಿ ರಂಗಭೂಮಿ ಚಟುವಟಿಕೆಗಳು ಪ್ರಾರಂಭವಾದವು. ಕಲ್ಕತ್ತೆಯ ಲಾಲ್‌ಬಜಾರ ಬೀದಿಯಲ್ಲಿರುವ “ದಿ ಪ್ಲೇ ಹೌಸ್” (The Play House) ಎಂಬ ರಂಗಮಂದಿರದಲ್ಲಿ ಮೊಟ್ಟ ಮೊದಲಿಗೆ 1774 ರಲ್ಲಿ ಪ್ರಾರಂಭವಾಯಿತು. ಭಾರತದಲ್ಲಿ ರಂಗಭೂಮಿಗೆ 2500 ವರ್ಷಗಳ ಇತಿಹಾಸವಿದೆ. ಅದು ಮನರಂಜನೆಯ ಪ್ರದರ್ಶನಾತ್ಮಕ ಕಲೆಯಾಗಿ ಬೆಳೆದುಬಂದಿದೆ. ನಾಟಕಗಳ ಪ್ರದರ್ಶನದಲ್ಲಿ ಅನೇಕ ವ್ಯತ್ಯಾಸಗಳಿದ್ದರೂ ಅವುಗಳನ್ನು ಸರಿದೂಗಿಸಿ ಒಪ್ಪಿಕೊಂಡು ಮುಂದೆ ಸಾಗಿದೆ. ಇತಿಹಾಸಕಾರರಾದ ಆಸ್ಕರ್ ಬ್ರಾಕೆಟ್ ಮತ್ತು ಫ್ರಾಂಕ್ಲಿನ್ ಹಿಲ್ಡಿ ಅವರ ಪ್ರಕಾರ ‘ಆಚರಣೆಗಳು ಸಾಮಾನ್ಯವಾಗಿ ಮನರಂಜನೆ ಅಥವಾ ಆನಂದವನ್ನು ನೀಡುವ ಅಂಶಗಳನ್ನು ಒಳಗೊಂಡಿರುತ್ತವೆ’. ಉದಾಹರಣೆಗೆ ವೇಷ–ಭೂಷಣಗಳು, ಮುಖವಾಡಗಳು ಹಾಗೂ ಕೌಶಲ್ಯಪೂರ್ಣ ಪ್ರದರ್ಶಕರು. ಸಮಾಜಗಳು ಹೆಚ್ಚು ಸಂಕೀರ್ಣವಾಗುತ್ತಿದ್ದಂತೆಯೇ ಈ ಅದ್ಭುತ ಅಂಶಗಳು ಆಚರಣೆಗೆ ಬಾರದ ಪರಿಸ್ಥಿತಿಗಳಲ್ಲಿ ಅಭಿನಯ ಕಲೆ ಪ್ರಾರಂಭವಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ರಂಗಭೂಮಿಯನ್ನು ಸ್ವಾಯತ್ತ ಚಟುವಟಿಕೆಯಾಗಿ ಪರಿವರ್ತಿಸಲು ಮೊದಲ ಹೆಜ್ಜೆಯನ್ನು ಇಡಲಾಯಿತು.

ರಂಗಭೂಮಿ ಉಗಮ ವಿಕಾಸ:– ಭಾರತದಲ್ಲಿ ರಂಗಭೂಮಿಯು ಅತ್ಯಂತ ಪ್ರಾಚೀನವಾದ ಕಲೆಯಾಗಿದೆ. ಮನುಷ್ಯನಲ್ಲಿರುವ ಅನುಕರಣೆಯ ಪ್ರವೃತ್ತಿ, ದೈವಿ ಶ್ರದ್ಧೆ ಹಾಗೂ ಮನರಂಜನೆಯ ಗುಣಗಳೇ ಈ ಕಲೆಯ ಉಗಮಕ್ಕೆ ಮುಖ್ಯವಾದ ಕಾರಣವಾಗಿದೆ. ಮೊದಮೊದಲು ಮನುಷ್ಯನು ತನ್ನ ಭಾವನೆಗಳನ್ನು ಸನ್ನೆಗಳ ಮೂಲಕವಾಗಲಿ ಅಥವಾ ಚಿತ್ರಗಳ ಮೂಲಕವಾಗಲಿ ವ್ಯಕ್ತಪಡಿಸುತ್ತಿದ್ದನು. ನಂತರ ಆಂಗಿಕ ಅಭಿನಯವನ್ನು ಬಳಸಲು ಪ್ರಾರಂಭಿಸಿದನು. ಮುಂದುವರೆದಂತೆ ಆದಿವಾಸಿಗಳು ಇದನ್ನೇ ಸಂವಹನ ಮಾಧ್ಯಮವನ್ನಾಗಿ ಬಳಸುತ್ತಿದ್ದರು. ಆದಿವಾಸಿಗಳು ಬೇಟೆಯಾಡುವುದು ಹಾಗೂ ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವದು ಸೇರಿದಂತೆ ಅನುಕರಣೆ ಮೂಲಕ ದೈನಂದಿನ ಜೀವನ ವ್ಯವಹಾರಗಳು ನಡೆಯುತ್ತಿದ್ದವು. ಹಾಗಾಗಿ ಅನುಕರಣೆಯೇ ಮೊದಲ ಭಾಷೆ ಮತ್ತು ಸಂಭಾಷಣೆಯಾಯಿತು. ಕ್ರಮೇಣ ಕುಣಿತ, ಜಿಗಿತ ಇವು ಕಲೆಯಾಗಿ ರೂಪುಗೊಳ್ಳುತ್ತಾ ಬಂದವು.

ನಾಟಕ ಎಂಬ ಶಬ್ದದ ಮೂಲ ರೂಪ “ನಟ್” ಎಂಬುದಾಗಿದೆ, ನಟ್ ಎಂದರೆ ಕುಣಿತ ಅಭಿನಯ, ಅಭಿನಯಿಸು ಎಂಬ ಅರ್ಥವನ್ನು ಕೊಡುತ್ತದೆ. ಪ್ರಕೃತಿಯ ಬಗ್ಗೆ ಹಾಗೂ

ಪ್ರಕೃತಿಯ ಶಕ್ತಿಗಳ ಬಗ್ಗೆ ಅಂದಿನ ಜನರಲ್ಲಿ ಅಪಾರವಾದ ನಂಬಿಕೆಯಿತ್ತು. ಹಾಗೆ ನಟಿಸುವದರಿಂದ ತಮಗೂ ಅಂತಹ ಶಕ್ತಿ ಬರುತ್ತದೆ ಎಂಬುದು ಅವರ ಭಾವನೆಯಾಗಿತ್ತು. ಹಾಗಾಗಿ ಕೃಷಿ ದೇವತೆಯ ಮೂರ್ತಿಮಾಡಿ ಮಳೆ, ಮೋಡ, ಮಿಂಚನ್ನು ಅನುಕರಿಸಿ ಕುಣಿದರೆ ಮಳೆ ಬರುತ್ತದೆ ಎಂಬುದು ಅಂದಿನ ಜನರ ನಂಬಿಕೆಯಾಗಿತ್ತು. ಕೆಲವರು ಪ್ರಕೃತಿಯ ಶಕ್ತಿಗಳನ್ನು ಅನುಕರಿಸಿ ಕುಣಿದರೆ ಇನ್ನು ಕೆಲವರು ಅವರಿಗೆ ಪ್ರೋತ್ಸಾಹ ಎನ್ನುವಂತೆ ಚಪ್ಪಾಳೆ ತಟ್ಟುತ್ತಿದ್ದರು. ಕೆಲವರು ಬೇಟೆಗಾರರಾದರೆ ಉಳಿದವರು ಪ್ರಾಣಿಗಳ ಮುಖವಾಡ ಹಾಕಿ ಅಭಿನಯಿಸುತ್ತಿದ್ದರು. ಹೀಗೆ ಮಾನವನ ಕಲ್ಪನೆ ಬೆಳೆಯುತ್ತಾ ಹೋದಂತೆ ಹಾಡು, ಮಾತು, ಕುಣಿತ ಇವೆಲ್ಲವೂ ಸೇರಿ ರಂಗಭೂಮಿಯ ರೂಪ ಪಡೆಯಿತು.

ರಂಗಭೂಮಿ ಎಂಬ ಪದವು ಆಂಗ್ಲ ಭಾಷೆಯ "Theatre" ಎಂಬ ಪದಕ್ಕೆ ಸಂವಾದಿಯಾಗಿದೆ. Theatre (ಥಿಯೇಟರ್) ಎಂಬ ಪದವು ಗ್ರೀಕ್ ಭಾಷೆಯ ಥಿಯೋಟ್ರಾಪ್ ದಿಂದ ಬಂದಿದೆ. ಅಂದರೆ ನೋಡುವ ಸ್ಥಳ, ಇದನ್ನೇ ರಂಗಮಂದಿರ ಎನ್ನಲಾಗಿದೆ. ರಂಗಭೂಮಿ ಬೇರೆಯವರನ್ನು ಮನರಂಜಿಸುವದಕ್ಕಾಗಿ ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ಗೊತ್ತು ಮಾಡಿದ ಒಂದು ಕಲಾ ಸೃಷ್ಟಿ. ಹಲವಾರು ಕಲೆಗಳನ್ನು ಕಲಾವಿದರು ಕೂಡಿಸಿಕೊಂಡು ಬಂದಿರುವುದರಿಂದ ರಂಗಭೂಮಿಯನ್ನು ಮೇಳ ಕಲೆ ಎಂದೂ ಲಲಿತ ಕಲೆಗಳ ಸಂಗಮ ಕಲೆ ಎಂದೂ ಕರೆಯುವುದುಂಟು.

ರಂಗಭೂಮಿ ಕಲೆ ಉಳಿಸಿ ಬೆಳೆಯುವುದಕ್ಕೆ ಉತ್ತಮವಾದ ಸಾಹಿತ್ಯ ಬೇಕೇ ಬೇಕು. ಅಭಿನಯಕ್ಕೆ ನಿರ್ದಿಷ್ಟ ಸ್ಥಳದ ಅನುಕೂಲವಿರಬೇಕು. ಇವೆರಡರ ಅವಿನಾಭಾವ ಸಂಗಮವೇ ನಾಟಕ ಅಥವಾ ರಂಗಕೃತಿ ಎಂಬುದಾಗಿದೆ. ಇದನ್ನು ರಂಗಪ್ರಯೋಗ ಎಂದೂ ಕೂಡಾ ಕರೆಯುತ್ತಿದ್ದಾರೆ. ಉದಾ: ಕವಿರತ್ನ ಕಾಳಿದಾಸನು ಬರೆದ ಮಾಲವಿಕಾಗ್ನಿಮಿತ್ರ ನಾಟಕದಲ್ಲಿ "ಪ್ರಯೋಗ ಪ್ರಧಾನಮ್ ಹೀ ನಾಟ್ಯಂ" ಎಂಬ ಉಲ್ಲೇಖವಿದೆ. ನಾಟಕವು ಆಡುವ ಕಲೆಯಾಗಿದೆ ಎಂದು ಆದ್ಯರಂಗಾಚಾರ್ಯರು ಅಭಿಪ್ರಾಯ ಪಡುತ್ತಾರೆ.

ಅತ್ಯಂತ ಪ್ರಾಚೀನ ರಂಗಭೂಮಿ ಎಂದರೆ ಅದು ಗ್ರೀಕ್ ರಂಗಭೂಮಿ. ಅಲ್ಲಿಯ ಜನರು ಡಯೋನಿಸಸ್ ಎಂಬ ದೇವತೆಯನ್ನು ಧಾರ್ಮಿಕ ಆಚರಣೆಯಿಂದ ಫಲ ಕೊಡುವ ದೇವತೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಆದ್ದರಿಂದ ಅವರು ಅತ್ಯಂತ ಆವೇಶ ಭರಿತರಾಗಿ ತಾಳ, ಮೇಳಗಳ ಜೊತೆ ಗೀತೆಗಳನ್ನು ಹಾಡುತ್ತಾ ಕುಣಿಯುತ್ತಾ ಉತ್ಸವವನ್ನು ಮಾಡುತ್ತಿದ್ದರು. ಮೇಳದ ನಾಯಕ ಜನ ಸಮೂಹದ ಮಧ್ಯ ನಿಂತು ಕೆಲವು ಮಾತುಗಳನ್ನು ಹೇಳುತ್ತಿದ್ದನು, ಮುಂದೆ ಅದೇ ಗ್ರೀಕ್ ರಂಗಮಂದಿರಕ್ಕೆ ಮಾದರಿಯಾಯಿತು. ಈ ಗ್ರೀಕ್ ರಂಗಭೂಮಿಯೇ ಒಂದು ಶಾಸ್ತ್ರವಾಗಿ, ಶ್ರೇಷ್ಠ ಕಲೆಯಾಗಿ ಬೆಳೆದು ಬಂದ ವಿಚಾರಗಳು ಅರಿಸ್ಟಾಟಲನ ಕಾವ್ಯಮೀಮಾಂಸೆಯಲ್ಲಿ ಕಂಡುಬರುತ್ತವೆ.

ಭಾರತೀಯ ರಂಗಭೂಮಿಯೂ ಸಹ ಗ್ರೀಕ್ ರಂಗಭೂಮಿಯಂತೆ ಧಾರ್ಮಿಕತೆಯ ಹೆಸರಿನಲ್ಲಿ ಅವುಗಳ ಆಚರಣೆಯ ಮೂಲಕವಾಗಿಯೇ ಬೆಳೆಯುತ್ತಾ ಬಂದಿದೆ. ಪ್ರಾಚೀನ ರಂಗಭೂಮಿಯ ಬಗ್ಗೆ ಹೇಳಬೇಕೆಂದರೆ ವೇದ, ಪುರಾಣ, ಕಾವ್ಯಗಳಲ್ಲಿಯ ಉತ್ಸವ, ದೇವರ ಜಾತ್ರೆಗಳಲ್ಲಿ ನಡೆಯುತ್ತಿದ್ದ ಹಾಡು, ಕುಣಿತಗಳ ಪ್ರದರ್ಶನಗಳೇ ಮುಂದೆ ಸಂಭಾಷಣೆಗಳು, ಕಥೆಗಳು ಎಂಬಿತ್ಯಾದಿಯಾಗಿ ಅದು ಕಲೆಯಾಗಿ ಪರಿವರ್ತನೆಯಾಯಿತು. ಭರತಮುನಿಯು ತನ್ನ ನಾಟ್ಯಶಾಸ್ತ್ರ ಗ್ರಂಥದಲ್ಲಿ ನಮ್ಮ ರಂಗಭೂಮಿಯ ಮೇಲೆ ಬೆಳಕು ಚಲ್ಲಿದ್ದಾನೆ. ಹಾಗೂ ನಾಟ್ಯಶಾಸ್ತ್ರದಲ್ಲಿ ಹೇಳಿರುವ ಕಥೆಯು ಅತ್ಯಂತ ಪ್ರಸಿದ್ಧವಾದುದು ಆಗಿದೆ. ಹಿಂದೆ

ತ್ರೇತಾಯುಗದಲ್ಲಿ ಧಾರ್ಮಿಕ ಭಾವನೆಗಳಿಗಿಂತ ಕಾಮ ಕ್ರೋಧಗಳ ಪ್ರಭಾವ ಹೆಚ್ಚಾಗುತ್ತಾ ಹೋದಂತೆ ಸುಖ ಸಂತೋಷದ ಜೊತೆಗೆ ದುಃಖ ಸಂಕಟಗಳು ಹೆಚ್ಚಾದವು. ಜನರ ಈ ವರ್ತನೆಗಳಿಂದ ದೇವಾನುದೇವತೆಗಳಿಗೆ ಮತ್ತು ದಾನವರಿಗೆ ಸಮಸ್ಯೆಗಳು ಉಂಟಾದವು. ಆಗ ಇಂದ್ರನ ಮುಖಂಡತ್ವದಲ್ಲಿ ಎಲ್ಲರೂ ಬ್ರಹ್ಮನ ಬಳಿಗೆ ಹೋಗುತ್ತಾರೆ. ಯಾಕೆಂದರೆ ವೇದಗಳಲ್ಲಿ ಶೂದ್ರರಿಗೆ ಪ್ರವೇಶದ ನಿಷಿದ್ಧತೆ ಇರುತ್ತದೆ. ಅದಕ್ಕೆ ಪರಿಹಾರ ಎಂಬಂತೆ ಎಲ್ಲರಿಗೂ ಅವಕಾಶ ಸಿಗುವ 5ನೆಯ ವೇದವನ್ನು ತಮಗೆ ರಚಿಸಿ ಕೊಡಬೇಕು ಎಂಬ ಬೇಡಿಕೆಯಿಂದಾಗಿ ಬ್ರಹ್ಮನು ಋಗ್ವೇದದಿಂದ ಕಥೆಯನ್ನು, ಯಜುರ್ವೇದದಿಂದ ಅಭಿನಯವನ್ನು, ಸಾಮವೇದದಿಂದ ಸಂಗೀತವನ್ನು, ಅಥರ್ವಣವೇದದಿಂದ ರಸಭಾವವನ್ನು ಸೇರಿಸಿಕೊಂಡು ಅತ್ಯಂತ ಸುಂದರವಾದ ಪಂಚಮವೇದವಾಗಿ ನಾಟಕವನ್ನು ಸೃಷ್ಟಿಸಿಕೊಟ್ಟನು. ಭರತನ ನಾಟ್ಯಶಾಸ್ತ್ರವು ರಂಗಭೂಮಿಯ ಕುರಿತು ಕೂಲಂಕಶವಾಗಿ ಚರ್ಚಿಸುವ ಅಪರೂಪದ ಗ್ರಂಥವಾಗಿದೆ. ಇದೇ ಪಂಚಮವೇದವಾಗಿದ್ದು, ಇದು ಜ್ಞಾನದ ಜೊತೆಗೆ ಮನರಂಜನೆಯನ್ನು ಸಹ ನೀಡುತ್ತದೆ. ನಾಟ್ಯಶಾಸ್ತ್ರದಲ್ಲಿಯ ರಂಗಭೂಮಿ ಅಭಿನಯದ ಬಗ್ಗೆ ಮತ್ತು ಅಭಿನಯವು ನಾಲ್ಕು ಪ್ರಕಾರದಲ್ಲಿದೆಯೆಂದು ತಿಳಿಸುತ್ತದೆ. ಜಗತ್ತೇ ಒಂದು ರಂಗಭೂಮಿ, ಮಹೇಶ್ವರನು ಒಬ್ಬ ಮಹಾನಟ, ಜಗತ್ತಿನಲ್ಲಿಯ ಹಾವಭಾವ ಚಲನವಲನಗಳೆಲ್ಲ ಅವನ ಆಂಗಿಕ ಅಭಿನಯ, ಅಂತರಂಗದಿಂದ ಮೂಡಿಬರುವ ಭಾವಗಳೆಲ್ಲವೂ ಸಾತ್ವಿಕ ಅಭಿನಯ, ಜಗತ್ತಿನ ಭಾಷೆಗಳೆಲ್ಲವೂ ವಾಚಿಕ ಅಭಿನಯ, ಚಂದ್ರ, ತಾರೆ ಮುಂತಾದವುಗಳು ಆಹರ್ಯ ಅಭಿನಯ ಎಂದು ರಂಗಭೂಮಿಯ ವಿರಾಟ ರೂಪವನ್ನು ಒಂದು ಶ್ಲೋಕದಲ್ಲಿ ವರ್ಣಿಸಿದ್ದಾನೆ. ಅಂದರೆ ಆಂಗಿಕ ಅಭಿನಯ (ಅಂಗಾಂಗಗಳ ಚಲನವಲನ), ವಾಚಿಕ ಅಭಿನಯ (ಮಾತುಗಾರಿಕೆ), ಸಾತ್ವಿಕ ಅಭಿನಯ (ಭಾವಾಭಿನಯ) ಮತ್ತು ಆಹರ್ಯ ಅಭಿನಯ (ಬಣ್ಣ ವೇಷ ರಂಗಸಜ್ಜಿಕೆ) ಎಂದು ನಾಟ್ಯಶಾಸ್ತ್ರದಲ್ಲಿ ತಿಳಿಸಲಾಗಿದೆ.

ಭಾರತದ ನಾಟಕ ರಂಗಭೂಮಿಗೆ ಸುದೀರ್ಘವಾದ ಇತಿಹಾಸವಿದೆ, ಋಗ್ವೇದದಲ್ಲಿ ಪ್ರಾರ್ಥನಾ ಗೀತೆಗಳು ಹಾಗೂ ಸಂಭಾಷಣೆಗಳಲ್ಲಿ ನಾಟಕದ ಅಂಶಗಳು ಕಂಡುಬರುತ್ತವೆ. ರಾಮಾಯಣ, ಮಹಾಭಾರತ ಸೇರಿದಂತೆ ಶ್ರೀಕೃಷ್ಣನ ದಂತಕಥೆಗಳಲ್ಲಿ ಹಾಡು, ಕುಣಿತ ಸಂಭಾಷಣೆಗಳ ರೂಪದಲ್ಲಿ ನಾಟಕ ವಿಕಾಸಗೊಳ್ಳುತ್ತಾ ಬಂದಿತು. ಪಾಣೀನಿ (ಕ್ರಿ.ಪೂ. 6ನೇ ಶತಮಾನ)ಯ ನಾಟ್ಯಶಾಸ್ತ್ರವು ನಾಟಕಗಳ ಬಗ್ಗೆ ವಿವರಿಸಿದ ಉಲ್ಲೇಖಗಳಿವೆ. ಛೋಟಾ ನಾಗಪುರದಲ್ಲಿ ಭೂ ಉತ್ಖನನದ ವೇಳೆಯಲ್ಲಿ ಕ್ರಿ.ಪೂ. 2ನೇ ಶತಮಾನಕ್ಕೆ ಸಂಬಂಧಿಸಿದ ರಂಗಮಂದಿರ ದೊರೆತಿದೆ. ಅದು ನಾಟ್ಯಶಾಸ್ತ್ರಕ್ಕೆ ಹೋಲಿಕೆ ಇರುವದರಿಂದ ಪ್ರಾಚೀನ ಕಾಲದಲ್ಲಿಯೂ ಸಂಸ್ಕೃತ ನಾಟಕಗಳ ರಂಗಪ್ರದರ್ಶನಗಳು ನಡೆಯುತ್ತಿದ್ದವು ಎಂದು ತಿಳಿದು ಬರುತ್ತದೆ. (ಗದಗ–ಜಿಲ್ಲಾ ರಂಗಮಾಹಿತಿ, ಲೇ–ರವೀಂದ್ರ ಆರ್. ಕೊಪ್ಪರ, ಪುಟಸಂಖ್ಯೆ: 5)

ಕನ್ನಡ ರಂಗಭೂಮಿ:– ಕನ್ನಡ ರಂಗಭೂಮಿ ಪರಂಪರೆಯು ಅತ್ಯಂತ ಪ್ರಾಚೀನವಾದ ಇತಿಹಾಸವನ್ನು ಹೊಂದಿದೆ. ಕನ್ನಡ ರಂಗಭೂಮಿಯ ಪ್ರಕಾರಗಳಲ್ಲಿ ತೊಗಲುಗೊಂಬೆಯಾಟ, ಬಯಲಾಟ, ದಶಾವತಾರ ಮುಂತಾದವುಗಳು ಯಕ್ಷಗಾನದ ಆಟಗಳು, ದೊಡ್ಡಾಟ, ಘಟ್ಟದಕೋರೆ, ಶನಿಕಥೆಯಾಟ, ಶ್ರೀಕೃಷ್ಣಪಾರಿಜಾತ ಮುಂತಾದವುಗಳು ದೊಡ್ಡಾಟದ ಪ್ರಕಾರಗಳು. ಹಾಗೂ ಇತರೆ ನಾಟಕಗಳು ಪ್ರಮುಖವಾದವುಗಳಾಗಿವೆ. ರಾಮಾಯಣದ ಯಕ್ಷಗಾನ ಪ್ರಸಂಗಗಳು ಹದಿನಾರನೆಯ ಶತಮಾನದ್ದು. ಸಿಂಗಾರಾರ್ಯರು ರಚಿಸಿದ ಮಿತ್ರವಿಂದಾಗೋವಿಂದ ಇದು ಹದಿನೇಳನೆಯ ಶತಮಾನದಲ್ಲಿ ರಚಿಸಿದ ಕನ್ನಡದ ಮೊದಲ ನಾಟಕವಾಗಿದೆ. ಕನ್ನಡ ಶಾಸನಗಳನ್ನು ಅಭ್ಯಸಿಸಿದಾಗ ಕನ್ನಡ ಸಾಹಿತ್ಯದ ಸಾಕಷ್ಟು

ಸಾಕ್ಷಾಧಾರಗಳು ದೊರೆತಿವೆ. ಕ್ರಿ.ಶ. 1041ರಲ್ಲಿ ನಾಟಕದ ರಂಗ ಶಾಲೆ ಇತ್ತು ಎಂದು ತಿಳಿಸಿರುವ ಒಂದು ಶಿಲಾಫಲಕವು ಧಾರವಾಡದ ಹತ್ತಿರ ಮೂಗುಂದ (ಈಗಿನ ಮುಗುದ) ಎಂಬಲ್ಲಿ ಸಿಕ್ಕಿದೆ. ಇಕ್ಕೇರಿಯಲ್ಲಿ ವಿಜಯನಗರದ ಅರಸರ ಹಾಗೂ ಕೇಳದಿ ವೆಂಕಟಪ್ಪ ನಾಯಕರ ಕಾಲದಲ್ಲಿ ನಾಟಕ ಶಾಲೆಗಳು ಇದ್ದವು ಎಂಬುದು ಸಂಶೋಧನೆಗಳಿಂದ ತಿಳಿದು ಬರುತ್ತದೆ. ಸಿಂಗಾರಾರ್ಯ ಕವಿಯು ಬರೆದ ಮಿತ್ರವಿಂದಾ ಗೋವಿಂದ ನಾಟಕವು ಕನ್ನಡದ ಅತ್ಯಂತ ಪ್ರಾಚೀನ ನಾಟಕ ಎಂದು ಹೇಳಲಾಗಿದೆ. ಇದು ಶ್ರೀಹರ್ಷನ ರತ್ನಾವಳಿ ಎಂಬ ಸಂಸ್ಕೃತ ನಾಟಕದ ಅನುವಾದವಾಗಿದೆ. ಕಾಲ ಕಳೆದಂತೆ ಯಕ್ಷಗಾನ, ಬಯಲಾಟ ಇವು ರಂಗದ ಒಂದು ಪ್ರಮುಖ ಪದ್ಧತಿಯಾಯಿತು.

ವೃತ್ತಿ ನಾಟಕಗಳು ಕನ್ನಡ ಸಾಂಸ್ಕೃತಿಕ ಪರಂಪರೆಯ ಬೆನ್ನೆಲುಬಾಗಿದೆ, ಭಾಷಾ ವೈಭವ, ಗಾಯನ ಹಾಗೂ ಭವ್ಯವಾದ ಅಭಿನಯಕ್ಕೆ ಹೆಸರುವಾಸಿಯಾಗಿದೆ. ಇವು ಸಾಹಿತ್ಯ ಮತ್ತು ರಂಗಕಲೆಗಳ ಸಮ್ಮಿಲನವಾಗಿದೆ. ಸಮಾಜದ ವಿವಿಧ ಕ್ಷೇತ್ರಗಳ, ವಿವಿಧ ವ್ಯಕ್ತಿತ್ವಗಳ ಹಾಗೂ ವಿವಿಧ ಮುಖಗಳನ್ನು ಪ್ರತಿಬಿಂಬಿಸುವದಾಗಿದೆ. ಪ್ರದರ್ಶನದ ಮೂಲಕ ಪ್ರೇಕ್ಷಕರನ್ನು ಭಾವನಾತ್ಮಕವಾಗಿ ಸೆಳೆಯುವ ವಿಶಿಷ್ಟ ಸಾಮರ್ಥ್ಯವನ್ನು ಹೊಂದಿದೆ. ನಾಟಕವೆಂಬ ಪದ ಅತ್ಯಂತ ಪ್ರಾಚೀನ ಶಬ್ದವಾಗಿದೆ, ಗೋವಿಂದ ವೈದ್ಯ, ರತ್ನಾಕರವರ್ಣಿಗಳ ಕೃತಿಗಳಲ್ಲಿ ನಾಟಕ ಎಂಬ ಶಬ್ದದ ವರ್ಣನೆ ಕಂಡುಬರುತ್ತದೆ. ಹದಿನೇಳನೆಯ ಶತಮಾನದ ಆದಿಭಾಗದಲ್ಲಿದ್ದ ಭಟ್ಟಾಕಳಂಕನು ಕಾವ್ಯನಾಟಕಾಲಂಕಾರಕಲಾಶಾಸ್ತ್ರ ವಿಷಯಾಂಗಾಂಚ ಬಹುನಾಂ ಗ್ರಂಥನಾಮಪಿ ಭಾಷಾಕಥನಾ ಮುಷಲಭ್ಯ ಮಾನತ್ವಾತ್ ಎಂದು ಬರೆದಿದ್ದಾನೆ. ಕುಮಾರವ್ಯಾಸನು ತನ್ನ ಗದುಗಿನ ಭಾರತ ಮಹಾಕಾವ್ಯದಲ್ಲಿ ನಾಟಕ ಎಂಬ ಶಬ್ದವನ್ನು ಔಚಿತ್ಯಪೂರ್ಣವಾಗಿ ಬಳಸಿದ್ದಾನೆ. ಬಸವಪುರಾಣ ಬರೆದ ಭೀಮ ಕವಿಯು ಸೋಮದೇವಿಯನ್ನು ವರ್ಣಿಸುವಾಗ ಈ ರೀತಿ ಹೇಳಿದ್ದಾನೆ. ಶೃಂಗಾರಗೊಂಡು ಒಡವೆಗಳಿಂದ ಅಲಂಕೃತವಾಗಿ ನಾಟಕಕ್ಕೆ ಒಳಪಟ್ಟು ಈ ರೀತಿಯೊಳಪ್ಪಿ ನಡೆತಂದ ಚದುರೆ ಎಂದು ವರ್ಣಿಸಿದ್ದಾನೆ. ದುರ್ಗಸಿಂಹನು ಮಹಾದೇವಿ, ರೂಪಾದೇವಿ ಎಂಬ ರಾಣಿಯರು ಸೀತಾರಾಮರಾಗಿ ಕೃತಕ ನಾಟಕವನ್ನಾಡಿದರು ಎಂದು ಹೇಳಿದ್ದಾನೆ. ಹೊಯ್ಸಳ ದೊರೆಯಾದ ವೀರಬಲ್ಲಾಳನು ಅತ್ಯಂತ ನಿಪುಣನಾದ ಕಲಾವಂತ ನಟನಾಗಿದ್ದನೆಂದು ಸೊಬರದ ಶಿಲಾಶಾಸನ (1208) ರಲ್ಲಿ ತಿಳಿಸಲಾಗಿದೆ. ನೀಲಾಂಜನೆ ನೃತ್ಯ ಮಾಡಿದುದರ ವರ್ಣನೆಯು ಪಂಪನ ಆದಿಪುರಾಣದಲ್ಲಿದೆ. ಹೀಗೆ ಪೊನ್ನ, ರನ್ನ ಸೇರಿದಂತೆ ಸಾಕಷ್ಟು ಕವಿಗಳು ತಮ್ಮ ಕೃತಿಗಳಲ್ಲಿ ನಾಟಕ ಎಂಬ ಶಬ್ದವನ್ನು ಬಳಸಿದ್ದು ಕಂಡುಬರುತ್ತದೆ. ಇದು ಮನರಂಜನೆಯ ಕಲೆಯಾಗಿದ್ದು ಹತ್ತನೆಯ ಶತಮಾನದಿಂದಲಾದರೂ ಇದರ ಪ್ರದರ್ಶನವಾಗುತ್ತಿತ್ತು ಎಂದು ನಂಬಲಾಗಿದೆ.

ನಾಟಕವು ಭಾಷೆಯ ಮೂಲಕ ಸಂಭವಿಸಬೇಕಾದ ಒಂದು ಅನುಭವ ಎಂಬ ಮಾತು ಸಾಮಾನ್ಯರು ಅರ್ಥೈಸಿಕೊಳ್ಳುವ ವಿಷಯವಾಗಿತ್ತು. ನಾಟಕಗಳನ್ನು ರಂಗಭೂಮಿಯ ಮೇಲೆ ತರಲು ಸಾಧ್ಯ ಎಂಬುದನ್ನು ಕೆಲವು ಹವ್ಯಾಸಿ ಕಲಾವಿದರು ಹಳ್ಳಿಗಳ ಜಾತ್ರೆಯ ಸಂದರ್ಭದಲ್ಲಿ ಹಾಗೂ ಅಲ್ಲೊಮ್ಮೆ ಇಲ್ಲೊಮ್ಮೆ ನಾಟಕಗಳನ್ನು ಆಡುತ್ತಿದ್ದರು. ನಾಟಕಗಳನ್ನು ಅತ್ಯಂತ ಶ್ರದ್ಧೆಯಿಂದ ಗೌರವಿಸುತ್ತಿದ್ದರು. ಅದರಲ್ಲಿ ಬರುವ ಸಂಭಾಷಣೆಗಳನ್ನು ಅನಕ್ಷರಸ್ಥರಾಗಿದ್ದರೂ ಸಹ ತಾಲೀಮು (ಸತತ ಅಭ್ಯಾಸ) ಮಾಡುವದರ ಮೂಲಕ ರಂಗಸಜ್ಜಿಕೆಯ ಮೇಲೆ ಅಭಿನಯಿಸುತ್ತಿದ್ದರು. ಇದರಿಂದ ನಾಟಕ ಎಂದರೆ ರಂಗಭೂಮಿ ಮೇಲೆ ಅಭಿನಯಿಸಬಹುದಾದ ಸಾಹಿತ್ಯ ಪ್ರಕಾರ ಎಂಬುದು ಜನರ ಗ್ರಹಿಕೆಯಾಯಿತು.

ಒಬ್ಬ ಲೇಖಕ ತನ್ನ ಬುದ್ಧಿ ಸಾಮರ್ಥ್ಯಕ್ಕನುಗುಣವಾಗಿ ನಾಟಕಗಳನ್ನು ಬರೆಯುತ್ತಾನೆ.

ನಿರ್ದೇಶಕನು ಅದರಲ್ಲಿ ಸಂಭಾಷಣೆ, ಕೆಲವು ಭಾಗಗಳಲ್ಲಿ ಹಾಸ್ಯ, ವ್ಯಂಗ್ಯ, ಗಂಭೀರ್ಯ, ನಾಯಕ, ಖಳನಾಯಕ ಮತ್ತು ಸನ್ನಿವೇಶಗಳ ಧ್ವನಿಯ ಏರಿಳಿತ ಮುಂತಾದ ವಿಷಯಗಳಲ್ಲಿ ಜಾಣತನದಿಂದ ಬದಲಾವಣೆ ಮಾಡುತ್ತಾ ಇರುವ ಲೋಪ-ದೋಷಗಳನ್ನು ಮುಚ್ಚಿ ಹಾಕುತ್ತಾನೆ. ಪಾತ್ರಗಳ ಹೊಂದಾಣಿಕೆಯಲ್ಲಿ ರಸಭಾವಗಳು ಬೀರುವ ಹಾಗೇ ಪರಿವರ್ತಿಸುತ್ತಾ ನಾಟಕಗಳನ್ನು ಪ್ರಯೋಗಕ್ಕೆ ಅಣಿಮಾಡುತ್ತಾನೆ. ಅದನ್ನು ನೋಡಿದ ಪ್ರೇಕ್ಷಕರ ಮುಖದಲ್ಲಿಯ ಹಾಸ್ಯ, ಮೆಚ್ಚುಗೆ, ತಪ್ಪು ಕಂಡುಹಿಡಿಯುವಿಕೆ ಮುಂತಾದವುಗಳನ್ನು ಕಲಾವಿದನೇ ಅನುಭವಿಸಬೇಕಾಗುತ್ತದೆ.

ನಾಟಕ ಎಂಬುದು ಭಾಷೆಯ ಮೂಲಕವಾಗಿಯೇ ನಡೆಯಬೇಕಾದ ಒಂದು ಸೃಜನಶೀಲ ಕ್ರಿಯೆಯಾಗಿದೆ. ಓದುಗಾರರು ನಾಟಕದ ಸಾಹಿತ್ಯದ ಬಗ್ಗೆ ಚರ್ಚಿಸಿದರೆ ಲೇಖಕರು ಒಮ್ಮೆ ನಾಟಕವನ್ನು ಬಂದು ನೋಡಿ ನಿಮಗೆ ಅರ್ಥವಾಗುತ್ತದೆ ಎಂದು ಹೇಳುವವರನ್ನು ಗಮನಿಸಬಹುದು. ಇದರಿಂದ ನಾಟಕವನ್ನು ನೋಡುವದರಿಂದಾಗಲಿ ಅಥವಾ ಅದನ್ನು ಓದುವದರಿಂದಾಗಲಿ ವಿಷಯದ ಮೂಲವನ್ನು ಕಂಡು ಹಿಡಿಯುವದು ಕಷ್ಟಕರವಾಗುತ್ತದೆ. ಇದನ್ನು ತಿಳಿಯಬೇಕಾದರೆ ಮೂಲ ಪಾಠಕ್ಕೆ ಮೊರೆ ಹೋಗಬೇಕಾಗುತ್ತದೆ.

ಸಂಸ್ಕೃತಿ ಮತ್ತು ಸಾಹಿತ್ಯ ತನ್ನ ಹಿರಿಮೆ-ಗರಿಮೆಗಳನ್ನು ಮೆರೆದಂತೆ ಲಲಿತಕಲೆಗಳಲ್ಲಿಯೂ ಕನ್ನಡನಾಡು ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ದಕ್ಷಿಣ ಭಾರತದಲ್ಲಿಯೇ ಅತ್ಯಂತ ಉತ್ತಮ ಸ್ಥಾನವನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಕನ್ನಡ ನಾಡಿನಲ್ಲಿ ಕಂಡುಬರುವ ದೇವಸ್ಥಾನಗಳು, ಶಿಲಾಶಾಸನಗಳು, ಸಂಗೀತ, ಶಿಲ್ಪಕಲೆಗಳಲ್ಲಿ ತಮ್ಮದೇ ಆದ ಹೆಗ್ಗಳಿಕೆಯನ್ನು ಸಾರುತ್ತಿವೆ. ಕಾಲದ ಬದಲಾವಣೆಯಲ್ಲಿ ಸಾಕಷ್ಟು ವ್ಯತ್ಯಾಸಗಳಾದರೂ ಅವುಗಳಿಗೆ ಯಾವುದೇ ರೀತಿಯಾಗಿ ಮಣಿಯದೇ ಗಟ್ಟಿಯಾಗಿ ನಿಂತಿರುವುದು ಲಲಿತಗಳ ಪ್ರಾಚೀನತೆ, ವೈಶಿಷ್ಟ್ಯ ಹಾಗೂ ವ್ಯಾಪಕತೆಗಳ ಬಗ್ಗೆ ಜಗತ್ತೇ ಅಚ್ಚರಿಗೊಳ್ಳುವಂತಹ ವಿಷಯಗಳು ಬೆಳಕಿಗೆ ಬಂದಿವೆ. ಪ್ರಾಚೀನ ಕಾಲದಿಂದಲೂ ನಡೆದಂತಹ ಸಂಶೋಧನೆಗಳಿಂದಾಗಿ ಕನ್ನಡ ನಾಡಿನ ಕಲಾಮಂದಿರ ಹಾಗೂ ಕಲಾರಂಗಗಳಲ್ಲಿ ಇರುವಂತಹ ವಿಷಯಗಳನ್ನು ಕುರಿತು ಸಾಕಷ್ಟು ಪಂಡಿತರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿರುವುದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ "ಕರ್ನಾಟಕ ರಂಗಭೂಮಿ" ಡಾ.ಎಚ್. ಕೆ. ರಂಗನಾಥ ಅವರು ನಾಟ್ಯಭೂಷಣ (ಏಣಗಿ ಬಾಳಪ್ಪನವರ ಜೀವನ ಮತ್ತು ಸಾಧನೆ) ಭಾಗ-1, ಭಾಗ-2 ರಲ್ಲಿ ಆಧುನಿಕ ರಂಗಸಿದ್ಧಾಂತಗಳು, ಭಾಗ-3 ರಲ್ಲಿ ಕರ್ನಾಟಕ ರಂಗಭೂಮಿ, ಭಾಗ-4 ರಲ್ಲಿ ಕಂಪನಿ ನಾಟಕಗಳ ರಂಗಮೌಲ್ಯ, ಪ್ರಧಾನ ಸಂಪಾದಕರು, ಡಾ. ಎಂ.ಎಂ. ಕಲಬುರ್ಗಿ, ಸಂಪಾದಕರು ರಾಮಕೃಷ್ಣ ಮರಾಠೆ, ಗ್ರೀಕ್ ರಂಗಭೂಮಿ ಮತ್ತು ನಾಟಕ, ಎಲ್.ಶೇಷಗಿರಿರಾವ್, ಶ್ರೀರಂಗ ಸಂಪುಟ-1 (ಆಯ್ದ ನಾಟಕಗಳು 10), ಸಂಪಾದಕರು ಟಿ.ಪಿ.ಅಶೋಕ, ಕನ್ನಡ ರಂಗಭೂಮಿ, ಬಿ.ಫ್ಹಿ. ವೈಕುಂಟರಾಜು, ರಂಗಪ್ರಪಂಚ, ಪ್ರಪಂಚದ ರಂಗಭೂಮಿಗಳ ಪರಿಚಯಾತ್ಮಕ ಅಧ್ಯಯನ, ಆಧುನಿಕ ಕನ್ನಡ ನಾಟಕ (ವಿಸ್ತೃತ ಆವೃತ್ತಿ) ಡಾ. ಕೆ. ಮರುಳಸಿದ್ದಪ್ಪ, ಕಂಪನಿ ನಾಟಕ ಅರ್ಥಾತ್ ವೃತ್ತಿರಂಗಭೂಮಿ, ಪ್ರಕಾಶ ಗರುಡ ಮುಂತಾದ ಅನೇಕ ವಿದ್ವಾಂಸರು ರಂಗಭೂಮಿ ಹಾಗೂ ರಂಗನಟಿಯರ ಬಗ್ಗೆ ಸಾಹಿತ್ಯ ಸಂಪಾದನೆ ಮತ್ತು ಪ್ರಕಟಣೆಗಾಗಿಯೇ ತಮ್ಮ ಜೀವನವನ್ನು ಮೀಸಲಿಡುತ್ತಿದ್ದಾರೆ.

ಶಾಂತಕವಿಗಳ ನೇತೃತ್ವದಲ್ಲಿ "ಕೃತಪುರ ಮಂಡಳಿ" ಯು ಆಧುನಿಕ ಪದ್ಧತಿಗನುಸಾರವಾಗಿ ಸುಧಾರಿತ ರಂಗಮಂದಿರ, ಉಡುಗೆ-ತೊಡುಗೆಗಳನ್ನು ಮರಾಠಿ ಮತ್ತು ಪಾರ್ಸಿ ಕಂಪನಿಗಳಂತೆ ಅಳವಡಿಸಿಕೊಂಡಿತ್ತಾದರೂ ಹಿಂದಿನ ಕನ್ನಡ ಜಾನಪದ

ಸಂಪ್ರದಾಯವನ್ನು ಸಂಪೂರ್ಣವಾಗಿ ಕೈಬಿಟ್ಟಿರಲಿಲ್ಲ. ಅಭಿಜಾತ ಮತ್ತು ಜಾನಪದ ಪರಂಪರೆಗಳು ಸಮ್ಮಿಶ್ರ ಮಾದರಿಯೊಂದಿಗೆ ಮೊದಲು ಸೂತ್ರಧಾರನು ಪ್ರವೇಶಿಸುತ್ತಿದ್ದ. ಹೀಗೆ ನಾಟಕ, ನಾಟಕದ ಪರಂಪರೆಯನ್ನು ಹಾಗೂ ನಾಟಕ ಕಂಪನಿಗಳ ಬಗ್ಗೆ ವಿಚಾರದ ಹಂಚಿಕೆಯಾಗುತ್ತಿತ್ತು.

"ಕನ್ನಡ ರಂಗಭೂಮಿ" ಎಂಬ ಬಿ.ವಿ. ವೈಕುಂಟರಾಜ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಕಮಲಾಪುರ, ಇವರ ಪ್ರಕಾಶನದಲ್ಲಿ 1997 ರಲ್ಲಿ ಪ್ರಕಟಣೆ ಮಾಡಿದ್ದಾರೆ. ಇವರು ನಾಟಕಗಳು, ನಾಟಕ ಕಂಪನಿಗಳು, ಕಲಾವಿದರು ಹಾಗೂ ಕಲಾವಿದೆಯರ ಬಗ್ಗೆ ತಿಳಿಸುತ್ತಾ ಸುಬ್ಬಯ್ಯ ನಾಯ್ಡು, ನಟಭಯಂಕರ ಗಂಗಾಧರ ರಾಯರು, ಬಿ. ಜಯಮ್ಮ, ಮುಳವಳ್ಳಿ ಸುಂದರಮ್ಮ, ಲಕ್ಷ್ಮೀಬಾಯಿ, ಬಿ.ಜಯಶ್ರೀ ಮೊದಲಾದ ಪ್ರಮುಖ ಕಲಾವಿದೆಯರ ಸೇವೆಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿದ್ದಾರೆ.

ಕನ್ನಡ ರಂಗಭೂಮಿಗೆ 2000 ವರ್ಷಗಳ ಇತಿಹಾಸವಿದೆ. ಹಿಂದಿನಿಂದಲೂ ನೃತ್ಯಗೀತೆಯ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಹೆಗ್ಗಳಿಕೆ ನಮ್ಮ ಕನ್ನಡಿಗರ ಸಂಸ್ಕೃತಿಯದ್ದಾಗಿದೆ. ಪ್ರಾಚೀನದಿಂದಲೂ ಮಾನವನು ತನ್ನ ಭಾವನೆಗಳನ್ನು ಹಾಡು, ಕುಣಿತ, ಮೂಕಾಭಿನಯ ವಾದ್ಯಗಳನ್ನು ನುಡಿಸುವದು ಹಾಗೂ ಮಧ್ಯ ಮಧ್ಯ ಮಾತನಾಡುವದು ಮುಂತಾದವುಗಳು ನಾಟಕ ಪರಂಪರೆಯ ಉಗಮಕ್ಕೆ ನಾಂದಿಯಾಯಿತು. ಮಾನವ ಸಹಜ ಗುಣವಾದ ಅನುಕರಣೆ ಮೂಲಕ ಕಾಲದಿಂದ ಕಾಲಕ್ಕೆ ನಾಟಕದ ಭಾಗಗಳಾದ ಸಂಗೀತ, ನೃತ್ಯ, ಸಂಭಾಷಣೆ, ಪಾತ್ರ ಹಿಮ್ಮೇಳ, ವೇಷಭೂಷಣ ಮುಂತಾದವುಗಳು ಜನಪದ ಕಲೆಗಳ ರೂಪದಲ್ಲಿ ಇಂದಿಗೂ ಉಳಿದುಕೊಂಡು ಬಂದಿವೆ. (ಸಮೂಹ ಮಾಧ್ಯಮಗಳು ಮತ್ತು ರಂಗಭೂಮಿ ಸಂ: ಶ್ರೀ ಶಿವಮೂರ್ತೆಪ್ಪ ಕುರೇರ ಮತ್ತು ಶ್ರೀಮತಿ ಕಾವೇರಿ ಭೋಲಾ, ಪ್ರಸಾರಾಂಗ ಕವಿವಿ ಧಾರವಾಡ)

1850 ರಿಂದ 1880 ರವರೆಗೆ ಕರ್ನಾಟಕದ ಧಾರವಾಡ, ಹುಬ್ಬಳ್ಳಿ, ಬಿಜಾಪೂರ, ಗದಗ ಮುಂತಾದ ಉತ್ತರ ಕರ್ನಾಟಕದ ದೊಡ್ಡ ಪಟ್ಟಣಗಳಲ್ಲಿ ಮರಾಠಿ ನಾಟಕಗಳ ಪ್ರಭಾವವು ಹೆಚ್ಚಾಗಿದ್ದಿತು. ಇದರಿಂದ ಬೇಸತ್ತ ಕನ್ನಡಾಭಿಮಾನಿಗಳು ನಾಡು ನುಡಿಯನ್ನು ಉಳಿಸಿ-ಬೆಳೆಸಲು ಸಾಕಷ್ಟು ಹೋರಾಟಗಳನ್ನು ಮಾಡಿದರು. ಅಂತವರಲ್ಲಿ ಶಾಂತಕವಿ (ಸಕ್ಕರೆ ಭಾಳಾಚಾರ್ಯರು) 1877ರಲ್ಲಿ "ಶ್ರೀ ವೀರನಾರಾಯಣ ಪ್ರಸಾದಿಕ ಕೃತಪುರ ನಾಟಕ ಮಂಡಳಿ" ಯನ್ನು ಸ್ಥಾಪಿಸಿದರು. ತಾವು ರಚಿಸಿದ ಕೀಚಕ ವಧೆ, ಸುಧನ್ವ ವಧೆ, ಶ್ರೀಯಾಳ ಸತ್ವಪರೀಕ್ಷೆ, ಸೀತಾರಣ್ಯ ಪ್ರವೇಶ ಮುಂತಾದ ನಾಟಕಗಳು ಹಾಗೂ ಶ್ರೀನಿವಾಸ ಕವಿ ರಚಿಸಿದ ದ್ರೌಪದಿ ವಸ್ತ್ರಾಪಹರಣ ಮತ್ತು ಭಸ್ಮಾಸುರ ವಧೆ ನಾಟಕಗಳು ಪ್ರಸಿದ್ಧವಾದ ಬಯಲಾಟಗಳಾಗಿವೆ. ಇವರ ಪರಿಶ್ರಮದಿಂದಾಗಿ ಉತ್ತರ ಕರ್ನಾಟಕದಲ್ಲಿ ಮರಾಠಿ ಪ್ರಭಾವವನ್ನು ತಡೆಯಲು ಸಾಧ್ಯವಾಯಿತು. ಶಾಂತಕವಿಗಳನ್ನು "ಕರ್ನಾಟಕ ನಾಟಕ ಪ್ರಥಮ ಗುರು" ಎಂದು ಕರೆಯಲಾಗಿದೆ.

ರಂಗಭೂಮಿ ಮತ್ತು ಮಹಿಳೆಯರು:- ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಇತರೆ ಕ್ಷೇತ್ರಗಳಲ್ಲಿ ಪುರುಷ ಪ್ರಭಾವವು ಗಾಢವಾಗಿದ್ದಂತೆ ಮಹಿಳೆಯರ ಪ್ರಭಾವ ಕಡಿಮೆಯಾಗಿತ್ತು. ಆ ಹಿನ್ನೆಲೆಯಲ್ಲಿ ರಂಗಭೂಮಿ ಕ್ಷೇತ್ರದಲ್ಲಿ ಪುರುಷರೆ ಮುಂಚೂಣಿಯಲ್ಲಿದ್ದು ಮಹಿಳೆಯರು ಭಾಗವಹಿಸುವಿಕೆ ತುಂಬಾ ನಿರಸವಾಗಿತ್ತು. ಆದರೂ ವೃತ್ತಿರಂಗಭೂಮಿಗೂ ಸ್ತ್ರೀಯರಿಗೂ ನೂರಾರು ವರ್ಷಗಳ ಹಿಂದಿನಿಂದಲೂ ನಿಕಟವಾದ ಸಂಬಂಧವಿದೆ. ರಾಜ-

ಮಹಾರಾಜರ ಕಾಲದಿಂದಲೂ ಸಂಗೀತ ಹಾಗೂ ನೃತ್ಯದಂತಹ ಮನರಂಜನೆಯ ಕಲಾ ಪ್ರಕಾರಗಳಲ್ಲಿ ಸ್ತ್ರೀಯರು ಭಾಗವಹಿಸುತ್ತಿದ್ದರು. ಆದರೆ ಅವರು ರಂಗಭೂಮಿಗೆ ಅಭಿನೇತ್ರಿಯಾಗಿ ಪ್ರವೇಶ ಪಡೆಯಲು ಸಾಕಷ್ಟು ಸಮಯವನ್ನು ತೆಗೆದುಕೊಂಡಿದೆ. ಇದಕ್ಕೆ ಕಾರಣವೇನಂದರೆ ಅವತ್ತಿನ ಸಾಮಾಜಿಕ ಪರಿಸ್ಥಿತಿ, ಹೆಣ್ಣಿಗೆ ಕೊಡುವ ಗೌರವ, ಅವಳ ಬಗ್ಗೆ ಇರುವ ಭಾವನೆ ಮುಂತಾದವುಗಳ ಕಾರಣದಿಂದ ಹಿಂದೇಟು ಹಾಕುತ್ತಿದ್ದರು. ಮೊದ-ಮೊದಲು ದೇವದಾಸಿಯರು ನಾಗಸಾನಿ ಪಾತ್ರದವರು ಇಂತಹ ಕುಟುಂಬದ ಮಹಿಳೆಯರಷ್ಟೆ ನಾಟಕಗಳಲ್ಲಿ ಪಾತ್ರ ಮಾಡಲು ಮುಂದೆ ಬರುತ್ತಿದ್ದರು. ಆದರೂ ಸಹ ಸಮಾಜದಲ್ಲಿ ಸ್ತ್ರೀಯರು ನಾಟಕಗಳಲ್ಲಿ ಪಾತ್ರ ಮಾಡುವುದೆಂದರೆ ಅದು ಮಹಾ ತಪ್ಪು, ಅದು ಮಾಡಬಾರದ ಕೆಲಸ ಎಂಬುದು ಜನರ ಭಾವನೆಯಾಗಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಅಂದರೆ 1870ರಲ್ಲಿ ಕೌಜಲಗಿಯ ನಿಂಗವ್ವ ಶ್ರೀಕೃಷ್ಣ ಪಾರಿಜಾತ ನಾಟಕದಲ್ಲಿ ಸತ್ಯಭಾಮೆಯ ಪಾತ್ರವನ್ನು ಮಾಡಿ ಜನರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿ ಮೆಚ್ಚುಗೆ ಪಡೆದಳು. ಇಲ್ಲಿಂದ ಸ್ತ್ರೀಯರ ಪಾತ್ರಕ್ಕೆ ಸ್ತ್ರೀಯರೇ ಅಭಿನಯಿಸುವ ಸನ್ನಿವೇಶ ರೂಪುಗೊಂಡಿತು. ಇದಕ್ಕೂ ಮೊದಲು ನಾಟಕಗಳಲ್ಲಿ ಸ್ತ್ರೀಯ ಪಾತ್ರವನ್ನು ಪುರುಷರೇ ಮಾಡುತ್ತಿದ್ದರು. ಇಂತಹ ಸಮಯದಲ್ಲಿ ತನ್ನ ಅಭಿನಯದ ಮೂಲಕ ಈ ಒಂದು ವ್ಯವಸ್ಥೆಗೆ ತಡೆಹಾಕಿ ಸ್ತ್ರೀಯರೂ ಸಹ ಪಾತ್ರಗಳನ್ನು ನಿರ್ವಹಿಸಲು ಸಮರ್ಥರೆಂಬುದನ್ನು ತೋರಿಸಿಕೊಟ್ಟವಳೇ ಕೌಜಲಗಿಯ ನಿಂಗವ್ವ. ಇದಾದ ನಂತರ ರಂಗಭೂಮಿಗೆ ಮಹಿಳೆಯರ ಭಾಗವಹಿಸುವಿಕೆ ಕಡಿಮೆ ಸಂಖ್ಯೆಯಲ್ಲಿದ್ದರೂ ಸಹ ಕೆಲವು ಮಹಿಳೆಯರು ತುಂಬ ಧೈರ್ಯದಿಂದ ಅಭಿನಯಕ್ಕೆ ಮುಂದಾಗಿರುವುದು ಕಂಡುಬಂದಿದೆ. ಕಾಲಾಂತರದಲ್ಲಿ ಮಹಿಳೆಯು ರಂಗಪ್ರವೇಶವನ್ನು ಮಾಡಲು ನಿರ್ಧರಿಸಿದಾಗ ಸಾಕಷ್ಟು ರೀತಿಯಲ್ಲಿ ಅವಳು ಕೌಟುಂಬಿಕವಾಗಿ, ಸಾಮಾಜಿಕವಾಗಿ ವಿರೋಧಗಳನ್ನು ಎದುರಿಸಬೇಕಾಯಿತು. ಆದಾಗ್ಯೂ ಕೂಡಾ ಆಕೆ ಯಾವುದನ್ನೂ ಲೆಕ್ಕಿಸದೇ, ಹೆದರದೇ ರಂಗಪ್ರವೇಶವನ್ನು ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ.

ಪ್ರಾಚೀನ ಕಾಲದಿಂದ ಹಿಡಿದು ಪ್ರಸ್ತುತ ತಲೆಮಾರಿನವರೆಗೂ ಮಹಿಳೆಯರು ಅಭಿನಯ ಕಲೆಯನ್ನು ಕರಗತ ಮಾಡಿಕೊಂಡು ಸಾಮಾನ್ಯ ಜನರ ಮನಸ್ಸಿನಲ್ಲಿ ಸ್ಥಾನ ಪಡೆದಿದ್ದಾರೆ. ಅಭಿನಯ ಕಲೆ ಎನ್ನುವದು ವಿವಿಧ ಕಲಾ ಪ್ರಕಾರಗಳಲ್ಲಿ ಮಹತ್ವದ ಸ್ಥಾನ ಪಡೆದಿರುವ ಪ್ರಮುಖವಾದ ಅಭಿನಯ ಕಲೆಯಾಗಿದೆ. ನಟನೆಯು ಕೆಲವರಲ್ಲಿ ರಕ್ತಗತವಾಗಿ ಅಂತರ್ಗತವಾಗಿರುತ್ತದೆ. ಹಾಗೂ ನಟನಾ ಕೌಶಲ ನಿರಂತರ ಅಭ್ಯಾಸದಿಂದ ಒಡಮೂಡುತ್ತದೆ. ನಟನೆಯನ್ನು ಶ್ರದ್ಧೆಯಿಂದ, ಪ್ರೀತಿಯಿಂದ ಹಾಗೂ ಸಂಪೂರ್ಣವಾಗಿ ಕರಗತ ಮಾಡಿಕೊಂಡವರಿಗೆ ಮಾತ್ರ ಒಲಿಯುತ್ತದೆ ಮತ್ತು ಹೆಚ್ಚಿನ ಹೆಸರು ಮಾಡಿ ಪ್ರಸಿದ್ಧಿ ಪಡೆಯಲು ಸಾಧ್ಯವಾಗುತ್ತದೆ. ಕಲಾವಿದನನ್ನು ವೇದಿಕೆಯಲ್ಲಿ ನೋಡಿದಾಗ ಮಾತ್ರ ಪ್ರೇಕ್ಷಕರಿಂದ ಪಾತ್ರಧಾರಿಗಳಿಗೆ ಮನ್ನಣೆ ಸಿಗುತ್ತದೆ. ಅದು ಕೆಲವರಿಗೆ ಮಾತ್ರ ಲಭಿಸಿ ಇನ್ನೂ ಕೆಲವರು ಅದರಿಂದ ವಂಚಿತರಾಗುತ್ತಾರೆ.

ಸುಮಾರು 130 ವರ್ಷಗಳ ಇತಿಹಾಸ ಹೊಂದಿದ ಕನ್ನಡ ರಂಗಭೂಮಿಗೆ ಮಹಿಳೆ ಆಗಲೇ ತನ್ನ ಪ್ರವೇಶವನ್ನು ನಿಧಾನವಾಗಿ ಪ್ರಾರಂಭ ಮಾಡಿಬಿಟ್ಟಿದ್ದಳು. ಸಮಯ ಸರಿದಂತೆ ಅವಳ ಪಾತ್ರಗಳ ಮೂಲಕ ಸಾಧನೆಯನ್ನು ಮಾಡುತ್ತ ಗಟ್ಟಿಯಾಗಿ, ಧೈರ್ಯಶಾಲಿಯಾಗಿ, ದಿಟ್ಟತನದಿಂದ ನಾಟಕ ಮಂಡಳಿಯನ್ನು ಸ್ಥಾಪಿಸಿದ ಹೆಗ್ಗಳಿಕೆ "ಪಾಪಾಸಾನಿ" ಎಂಬಾಕೆಗೆ ಸಲ್ಲುತ್ತದೆ. 1872ರಲ್ಲಿ ನಾಟಕ ಕಂಪನಿಗಳು ಪ್ರಾರಂಭವಾದವು. ಮುಂದೆ 7-8 ವರ್ಷಗಳಲ್ಲಿ ಕೆಲವು ಪ್ರಸಿದ್ಧ ಕಂಪನಿಗಳಾದ ಗುಬ್ಬಿ ಕಂಪನಿ ರಾಜಮ್ಮ, ಬಳ್ಳಾರಿ ಲಕ್ಷ್ಮಮ್ಮ, ಗುಳೇದಗುಡ್ಡದ

ಯಲ್ಲಾಬಾಯಿ, ಹಾಗೆಯೇ ಲಕ್ಷ್ಮೇಶ್ವರದ ಬಟ್ಟಾಸಾನಿಯು ನಾಟಕ ಮಂಡಳಿ ಸ್ಥಾಪಿಸಿ ಇದರಲ್ಲಿ ಪುರುಷರ ಪಾತ್ರವನ್ನೂ ಸ್ತ್ರೀಯರೇ ವಹಿಸುತ್ತಿದ್ದರು. ಪುರುಷ ಪಾತ್ರವನ್ನು ಮಹಿಳೆಯರೆ ನಿಭಾಯಿಸುವದು ಹೊಸ ಪರಂಪರೆಗೆ ಕಾರಣವಾಯಿತು. ಇದು ರಂಗಭೂಮಿ ಇತಿಹಾಸದಲ್ಲಿಯೇ ಹೆಮ್ಮೆಯ ವಿಷಯವಾಗಿದೆ. 1925ರಲ್ಲಿ ಗುಳೇದಗುಡ್ಡದ ಗಂಗೂಬಾಯಿ ಶ್ರೀಕೃಷ್ಣ ನಾಟಕ ಮಂಡಳಿ, ನಂಜಾಸಾನಿ ಮತ್ತು ಲಕ್ಷ್ಮಮ್ಮಸಾನಿ, ಅಂಬುಜಮ್ಮ, ಸೋನುಭಾಯಿ ದೊಡ್ಡಮನಿ, ಸಿ.ಬಿ. ಮಲ್ಲವ್ವ ಮುಂತಾದವರು ನಾಟಕ ಮಂಡಳಿಗಳನ್ನು ಸ್ಥಾಪಿಸಿ ನಾಟಕ ಪ್ರದರ್ಶನ ಮಾಡಿ ಅತ್ಯಂತ ವೈಭವದಿಂದ ಜೀವನ ನಡೆಸಿದರು. ಹಾಗೂ 1950 ರಲ್ಲಿ ಕುಕನೂರು ರಹಮಾನವ್ವ "ಲಲಿತಕಲಾ ನಾಟ್ಯ ಸಂಘ" ಸ್ಥಾಪಿಸಿ ಪೌರಾಣಿಕ ಹಾಗೂ ಸಾಮಾಜಿಕ ನಾಟಕ ಪ್ರದರ್ಶನ ಮಾಡಿ ದಾಖಲೆಯನ್ನು ಸ್ಥಾಪಿಸಿದರು. ಈ ಹೊತ್ತಿಗೆ ಹಂಸನೂರಿನ ನಟಿಯರು, ಹುಬ್ಬಳ್ಳಿಯ ಥೇರೇಸಮ್ಮ, ಅಂಬುಜಮ್ಮ, ಶಿರಹಟ್ಟಿ ಭಾರತಿ, ಜಯಂತಿ, ಜಯಲಕ್ಷ್ಮೀ ಹೆಗಡೆ, ಬಳ್ಳಾರಿಯ ಸುಜಾತಮ್ಮ, ಸರಸ್ವತಿ ನಾಯ್ಡು ಮುಂತಾದವರು ನಾಟಕ ಕಂಪನಿಯನ್ನು ಕಟ್ಟಿ ಅಭಿನಯ ಕಲೆಯನ್ನು ಪ್ರದರ್ಶಿಸಿದ ಹೆಮ್ಮೆಯ ಮಹಿಳೆಯರಾಗಿದ್ದಾರೆ. (ಗುಡಿಹಳ್ಳಿ ನಾಗರಾಜ ಲೇಖಕರು ಪ್ರಜಾವಾಣಿ ಪತ್ರಿಕೆ 2002)

ರಂಗಕಲಾವಿದರ ಜೀವನವು ಕಲೆಗಾಗಿಯೇ ಜೀವನ ಎಂಬಂತಿರುತ್ತದೆ. ಅವರು ಕಲೆಗೆ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡು ತ್ಯಾಗ ಗುಣಗಳ ಸಾಕಾರಮೂರ್ತಿಯಾಗಿದ್ದಾರೆ. ಇವರು ನಾಟಕಗಳ ಮೂಲಕ ಸಮಾಜದ ವಾಸ್ತವತೆಯನ್ನು ತಿಳಿಸಿಕೊಡುವ ಕೈಗನ್ನಡಿಯಾಗಿದ್ದಾರೆ. ಅವರು ಸಾಮಾಜಿಕ ಕಳಕಳಿಯಿಂದಾಗಿ ಪಾತ್ರಗಳಿಗೆ ಜೀವ ತುಂಬುವುದರ ಮೂಲಕ ಕಲಾತ್ಮಕ ಸಿದ್ಧಿಯನ್ನು ಸಾಧಿಸಿದ್ದಾರೆ. (ವಿಜಯ ಕರ್ನಾಟಕದ ಲೇಖನ). ಬಡತನ ಕಷ್ಟದ ಜೀವನದ ಮಧ್ಯೆಯೂ ನಾಟಕದ ಪಾವಿತ್ರ್ಯತೆಯನ್ನು ಕಾಪಾಡಲು ಶ್ರಮಿಸುತ್ತಾರೆ. ಕಲಾವಿದರು ಕಲೆಗಾಗಿ ಜೀವನವನ್ನು ಮುಡುಪಾಗಿಡುತ್ತಾರೆ. ರಂಗಭೂಮಿಯ ಮೇಲೆ ಬಣ್ಣದ ವೇಷಭೂಷಣ ಧರಿಸಿ ರಾಜನಾಗಿ, ಅಧಿಕಾರಿಯಾಗಿ, ದಾನಶೂರನಾಗಿ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಾರೆ. ಆದರೆ ಅದು ರಂಗಮಂಟಪದಲ್ಲಿ ಮಾತ್ರ, ಬಣ್ಣ ತೊಳೆದುಕೊಂಡ ಮೇಲೆ ಅವರ ಜೀವನ ಬಡತನದಲ್ಲಿಯೇ ಇರುತ್ತದೆ. ಅತ್ಯಂತ ಕಷ್ಟಕರವಾದ ಸಮಸ್ಯೆಗಳನ್ನು ಎದುರಿಸುವಲ್ಲಿಯೇ ಕಾಲ ಕಳೆಯಬೇಕು, ಇದು ಕಲಾವಿದೆಯರಿಗೂ ಹೊರತಾಗಿಲ್ಲ.

ಪುರುಷ ಪ್ರಧಾನವಾದ ಈ ಸಾಮಾಜಿಕ ವ್ಯವಸ್ಥೆಯಲ್ಲಿ ರಂಗಭೂಮಿ ನಟಿಯರನ್ನು ಅತ್ಯಂತ ಕೀಳು ದೃಷ್ಟಿಯಿಂದ ನೋಡುತ್ತ ಶೋಷಣೆಗೆ ಒಳಪಡಿಸಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ನಾನು ರಂಗನಟಿಯರನ್ನು ಸಂದರ್ಶನ ಮಾಡಿದಾಗ ಕೆಲವೊಂದಿಷ್ಟು ರಂಗನಟಿಯರು ಮಾತ್ರ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆಂಬುದು ತಿಳಿದುಬಂದಿತು. ಆದರೆ ಬಹಳಷ್ಟು ರಂಗನಟಿಯರ ಜೀವನ ರಂಗಭೂಮಿಯ ಮೇಲೆ ಇದ್ದಂತಹ ಬಣ್ಣ-ಬಣ್ಣದ ವೇಷ-ಭೂಷಣದ ರಾಣಿಯಾಗಿ, ಖಳನಾಯಕಿಯಾಗಿ, ಹಾಸ್ಯನಟಿಯಾಗಿ, ಅಧಿಕಾರಿಯಾಗಿ, ದಾನಶೂರೆಯಾಗಿ ವಹಿಸಿದ ಪಾತ್ರಗಳು ಬರೀ ರಂಗೇರಿದ ಬಣ್ಣ-ಬಣ್ಣದ ದೀಪದ ಬೆಳಕಿನಲ್ಲಿಯ ರಂಗಮಂಟಪದಲ್ಲಿ ಅಷ್ಟೇ. ಬಣ್ಣ ತೊಳೆದುಕೊಂಡ ಮೇಲೆ ಅವರ ಜೀವನ ಕಡು-ಬಡತನದಲ್ಲಿಯೇ ಅತ್ಯಂತ ಕಷ್ಟಕರವಾದ ಸಮಸ್ಯೆಗಳನ್ನು ಎದುರಿಸುವುದರಲ್ಲಿಯೇ ಕಳೆಯಬೇಕು. ರಾಣಿಯಾಗಿ ಪಾತ್ರ ನಿರ್ವಹಿಸಿ ನಂತರ ಬಣ್ಣ ತೊಳೆದುಕೊಂಡು ಹೊರಬಂದಕೂಡಲೇ ಬಸ್ಸಿಗೆ ದುಡ್ಡು ಹುಡುಕುವ ಪರಿಸ್ಥಿತಿಯನ್ನು ಬಹಳಷ್ಟು ರಂಗನಟಿಯರು ಎದುರಿಸಿದ್ದು ಕಂಡುಬರುತ್ತದೆ.

ಉದಾ: ರಂಗನಟಿ ಫ್ಲೋರಿನಾ ಅವರು ಶಹಪೂರಪೇಟೆಯ ಹಳ್ಳಿಕೇರಿ ಚಾಳಿನಲ್ಲಿ ವಾಸವಾಗಿದ್ದರು. ಶಹಪೂರಪೇಟೆಯು ನಾಟಕಕಾರರು, ಕವಿಗಳು, ಸೀನರಿ ಬರೆಯುವ ಪೇಂಟರ್‌ಗಳು, ವೇಷ-ಭೂಷಣ ಸರಬರಾಜುಗಾರರು, ಮೇಕಪ್ ಮ್ಯಾನ್‌ಗಳು, ತಬಲಾದವರು ಮುಂತಾದವರು ಒಟ್ಟಿಗೆ ನೆಲೆಸಿರುವ ಒಂದು ವಸಾಹತು ಇದ್ದಂತಿದೆ.

ಫ್ಲೋರಿನಾ ಅವರು ತೀರಾ ಚಿಕ್ಕದಾದ ಹಾಗೂ ಸಾಮಾನ್ಯವಾದ ಮನೆಯಲ್ಲಿ ವಾಸವಾಗಿದ್ದರು. ಅವರ ಬಾಳಸಂಗಾತಿ ಕೊಟ್ರಪ್ಪ ಲಕ್ಕುಂಡಿ. ಇವರು ತಮ್ಮ ಮನೆಯ ದೇವರ ಜಗುಲಿಯ ಮೇಲೆ ಪುಟ್ಟರಾಜ ಗವಾಯಿ ಹಾಗೂ ಯೇಸುಮೇರಿಯವರ ಚಿತ್ರಪಟಗಳನ್ನಿಟ್ಟಿದ್ದರು. ಬಣ್ಣದ ಲೋಕದಲ್ಲಿ ಮೆರೆದ ಬಹುತೇಕ ರಂಗನಟರ ಕೊನೆಯ ದಿನಗಳು ಸಾಮಾನ್ಯವಾಗಿ ದುರ್ಬರವಾಗಿರುತ್ತವೆ. ನಿದರ್ಶನವಾಗಿ ಅಪ್ಪಾಲಾಲ ನದಾಫ, ದುತ್ತರಗಿ ಇನ್ನೂ ಸಾಕಷ್ಟು ಕಲಾವಿದರು ತಮ್ಮ ಕೊನೆಯ ದಿನಗಳಲ್ಲಿ ನರಳಾಡಿ ರಂಗಲೋಕಕ್ಕೆ ವಿದಾಯ ಹೇಳಿದಂತವರ ಉದಾಹರಣೆಗಳನ್ನು ನೋಡಬಹುದು.

ನಮ್ಮ ಸುತ್ತ-ಮುತ್ತಲಲ್ಲಿ ಎಷ್ಟೋ ಅಂತರ್ ಧರ್ಮೀಯ ಸಂಬಂಧಗಳು ಕಾಣಸಿಗುತ್ತವೆ. ಈ ರೀತಿಯ ಸಂಬಂಧಗಳಲ್ಲಿ ರಂಗಭೂಮಿ, ಸಿನಿಮಾ, ಸಂಗೀತಗಳಂತಹ ಗಂಧರ್ವ ಕಲೆಗಳ ಲೋಕದಲ್ಲಿ ಇಂಥ ಸಂಬಂಧಗಳ ಪ್ರಮಾಣವು ಹೆಚ್ಚು ಸಿಗುತ್ತವೆ. ಕಂಪನಿಗಳಿಗೆ ಬೇರೆ ಬೇರೆ ಊರು, ಬೇರೆ ಬೇರೆ ಕುಟುಂಬಗಳಿಂದ ಬಂದು ಸೇರುತ್ತಾರೆ. ಮುಂದೆ ಪರಸ್ಪರ ಪರಿಚಯವು ಪ್ರೀತಿಯಾಗಿ ಸಂಗಾತಿಗಳಾಗುತ್ತಾರೆ. ಕೆಲವೊಮ್ಮೆ ಉತ್ತಮವಾಗಿ ನಟಿಸುವ ನಟಿಯರು ತಮ್ಮ ಕಂಪನಿಯನ್ನು ಬಿಟ್ಟು ಹೋಗಬಾರದೆಂದೋ ಅಥವಾ ಅವರಿಗೆ ವೇತನ ಕೊಡುವುದನ್ನು ತಪ್ಪಿಸಿಕೊಳ್ಳಲು ಸ್ವತಃ ಕಂಪನಿ ಮಾಲೀಕರೇ ಅವರನ್ನು ಮದುವೆಯಾಗುತ್ತಿದ್ದರು.

ಖ್ಯಾತ ವಿಮರ್ಶಕರು, ಚಿಂತಕರು, ಬರಹಗಾರರೂ ಆದ ರಹಮತ್ ತರಿಕೇರಿಯವರು ರಂಗನಟಿ ಫ್ಲೋರಿನಾ ಅವರನ್ನು ಭೇಟಿಯಾಗಿ ಸಂವಾದದ ಸಂದರ್ಭದಲ್ಲಿ ಫ್ಲೋರಿನಾ ಹಾಗೂ ಅವರ ಪತಿ ಕೊಟ್ರಪ್ಪರನ್ನು ಹೀಗೆ ಕೇಳಿದರಂತೆ- "ಧರ್ಮ ಸಂಬಂಧವಾಗಿ ನಿಮ್ಮ ಜೀವನದಲ್ಲಿ ಏನಾದರೂ ಇಕ್ಕಟ್ಟು ಎದುರಾಯಿತೇ?" ಎಂದು. ಇದಕ್ಕೆ ಕೊಟ್ರಪ್ಪನವರು "ಎಂಥಾ ಕೆಲಸ ಮಾಡಿಬಿಟ್ಯೋ ಕೊಟ್ರಪ್ಪ? ಅಂದರು ಜನ, ಇಲ್ಲಪ್ಪ ಅವಳ ಕಲಾಕ್ಕ ನಾನು ಮೆಚ್ಚಿದೀನಿ, ಧರ್ಮ-ಬಣ್ಣ ನೋಡಂಗಿಲ್ಲ, ಭೂಮಿಯೊಳಗೆ ಹೌದನ್ನುವಂಗ ಬದುಕಬೇಕು ಅಷ್ಟೇ ಅಂದಿನ್ರಿ. ಅವರನೇನೂ ಕೇರ್ ಮಾಡ್ಲಿಲ್ರಿ ನಾ" ಎಂದು ಹೇಳಿದರು. ಅದಕ್ಕೆ ಫ್ಲೋರಿನಾ ಈ ರೀತಿ ಉತ್ತರ ಕೊಟ್ಟಳು "ಕೆ.ಆರ್.ಪೇಟೆ ಕ್ಯಾಂಪಿನೊಳಗ ಇದ್ದಾಗ ನಮ್ ಜನ ಗುರುಗಳನ್ನ ಕೂಡಿಕೊಂಡು ಬಂದ್ರಿ, ನಮ್ಮ ಧರ್ಮದೊಳಗ ಹಿಂಗ ಪಾರ್ಟ್ ಮಾಡಂಗಿಲ್ಲ ನೀ ಹೊಳ್ಳಿ ಬಾ, ನಿನಗ ಸುಸೂತ್ರ ಜೀವನ ನಡಿಯೋ ಹಂಗ ವ್ಯವಸ್ಥಾ ಮಾಡತೀವಿ ಅಂದ್ರಿ, ನಾನು ಪಾರ್ಟ್ ಮಾಡಾಕ ಹತ್ತೀನಿ ಕ್ಯಾಂಪ್ ಕೀಳೋ ಹೊತ್ತಿನ್ಯಾಗ ಬರತೀನ ಅಂತಾ ಸುಳ್ಳು ಹೇಳಿ ತಪ್ಪಿಸಿಕೊಂಡು ಗದುಗಿಗೆ ಓಡಿಬಂದೀನ್ರಿ, ಈಗ ಎಲ್ಲಾ ಮತದೋರೂ ಪಾರ್ಟ್ ಮಾಡಲಿಕ್ಕ ಹತ್ಯಾರಂತಲ್ಲರಿ. ಆ ಕಲ್ಪನಾ ನಮ್ಮ ಊರೋರು ಅಂತಾ ಅದಕ್ಕ ನನಗೂ ಮಂದಿ ಮಿನುಗು ತಾರೆ ಅಂತಾನೇ ಕರಿತಾರ್ರಿ" ಅಂತಾ ಹೇಳಿದರು. ಹೀಗೆ ರಹಮತ್ ತರಿಕೇರಿಯವರು ಭೇಟಿಯಾದಾಗ ಆಡಿದ ಮಾತುಗಳನ್ನು ಅವರೇ "ರಂಗನಟಿ ಫ್ಲೋರಿನಾ ಜೊತೆ" ಎಂಬ ಲೇಖನದಲ್ಲಿ ಹೇಳಿಕೊಂಡಿದ್ದಾರೆ.

ಗದುಗಿನ ಶಹಪೂರಪೇಟೆಯು ರಂಗಕಲಾವಿದರ ತವರೂರಾಗಿದೆ, ಇಲ್ಲಿಯ ನಾಟಕ

ರಚನಾಕಾರರು, ಸೀನರಿ ಬರೆಯುವ ಪೇಂಟರ್‌ಗಳು, ವೇಷ-ಭೂಷಣ ಸರಬರಾಜುದಾರರು, ಮೇಕಪ್ ಮ್ಯಾನ್‌ಗಳು, ತಬಲಾದವರು, ಸಂಗೀತಗಾರರು ಹಾಗೂ ಕಲಾವಿದ-ಕಲಾವಿದೆಯರ ಕೊಡುಗೆಯು ಕನ್ನಡ ರಂಗಭೂಮಿ ಇತಿಹಾಸದಲ್ಲಿಯೇ ಅಪಾರವಾದುದು. ಇಲ್ಲಿನ ರಂಗನಟಿಯರ ದೊಡ್ಡ ಪರಂಪರೆಯೇ ಇದೆ. ಹೆಣ್ಣುಮಕ್ಕಳಿಗೆ ಯಾವುದೇ ಹೊರಬರಲಾರದಷ್ಟು ಕಟ್ಟುಕಟ್ಟಳೆಗಳಿದ್ದ ಕಾಲದಲ್ಲಿ ಮುಖಕ್ಕೆ ಬಣ್ಣಹಚ್ಚಿಕೊಂಡು ನಾಟಕ ಮಾಡುವುದು ಅತ್ಯಂತ ದುಸ್ತರದ ಸಂಗತಿಯೇ ಆಗಿತ್ತು. ಅಂತಹ ಸಮಯದಲ್ಲಿ ನಾಟಕ ಮಾಡುವುದಿರಲಿ, ನಾಟಕ ನೋಡುವುದೇ ಅಪರಾಧ ಎನ್ನುವ ಸ್ಥಿತಿಯಿದ್ದಾಗ ಧೈರ್ಯದಿಂದ ರಂಗಭೂಮಿಗೆ ಪ್ರವೇಶ ಮಾಡಿ ಪಾತ್ರ ಮಾಡಿ ಸೈಯೆನಿಸಿಕೊಂಡಂತಹ ಧೈರ್ಯವಂತ ನಟಿಯರು ಇದ್ದಾರೆ. ವಿಶೇಷವಾಗಿ ಶಹಪೂರ ಪೇಟೆಯ ರಂಗಭೂಮಿ ಕಲಾವಿದೆಯರು ನಟನೆಯನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡು ಬಾಳಿದ್ದಾರೆ. ಮೊದ-ಮೊದಲು ಇವರಲ್ಲಿಯೂ ಹಿಂಜರಿಕೆ, ಭಯ ಕಾಡಿತ್ತಾದರೂ ಕಾಲಕ್ರಮೇಣ ಕಂಪನಿ ನಾಟಕಗಳಲ್ಲಿ ಭಾಗವಹಿಸಿ, ಮುಂದೆ ಹವ್ಯಾಸಿಯಾಗಿ ಗ್ರಾಮೀಣ ಕಲಾವಿದರೊಂದಿಗೆ ನಟಿಸಿ ಸಾಧನೆಗೈದಿದ್ದಾರೆ.

ಗದಗ ಪರಿಸರದಲ್ಲಿನ ವೃತ್ತಿರಂಗಭೂಮಿ ಕಲಾವಿದರು:- ಗದಗ ಜಿಲ್ಲೆಯಲ್ಲಿ ಸುಮಾರು 38ಕ್ಕೂ ಹೆಚ್ಚು ರಂಗಕಲಾವಿದೆಯರಿದ್ದಾರೆ. ಸುಶೀಲಾ ಹಿರೇಮಠ, ಉಮಾದೇವಿ ಹಿರೇಮಠ, ಅನುಪಮ ಪರಶುರಾಮ ರಾಠೋಡ, ಪ್ರಿಯದರ್ಶನಿ ಹರೀಶ ಹಿರಿಯೂರು, ಹೇಮಾವತಿ ನಟರಾಜ ಹಿರೇಮಠ, ಅಂಬಿಕಾ ಹಿರಿಯೂರು, ಎನ್. ಮಂಜಮ್ಮ, ಶ್ವೇತಾ ಬೀಳಗಿ, ಕವಿತಾ ಪತ್ತಾರ, ಗಾಯತ್ರಿ ಹಿರೇಮಠ, ಸುವರ್ಣಾ ಮಡಿವಾಳರ, ಸುನಂದಾ ಹಿರೇಮಠ, ಮಂಜುಳಾ ಹಿರೇಮಠ, ಅನುಪಮ ಗದಗ ಮುಂತಾದವರು.

ಸುಶೀಲಾ ಹಿರೇಮಠ:- ಇವರು 04-04-1944ರಲ್ಲಿ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಜನಿಸಿದರು, ಇವರ ಪತಿ ನೀಲಕಂಠಸ್ವಾಮಿಗಳು, ಇವರಿಗೆ ನಾಲ್ವರು ಸಹೋದರಿಯರು, ಒಬ್ಬ ಸಹೋದರನ ಕುಟುಂಬದಲ್ಲಿ ಬೆಳೆದರು. ಇವರಿಗೆ ಮೂರು ಗಂಡು ಮಕ್ಕಳು ಸೇರಿದಂತೆ ಒರ್ವ ಮಗಳಿದ್ದಾಳೆ. ಗದಗ ಜಿಲ್ಲೆಯ ರಂಗಕಲಾವಿದೆಯರಲ್ಲಿ ಇವರು ಹಿರಿಯರು, ಇವರು 7ನೆಯ ತರಗತಿಯವರೆಗೆ ಶಿಕ್ಷಣವನ್ನು ಪಡೆದಿದ್ದು, ಉನ್ನತ ಶಿಕ್ಷಣ ಪಡೆದು ಏನಾದರೂ ಸಾಧನೆ ಮಾಡಬೇಕೆಂಬುದು ಬಾಲ್ಯದಲ್ಲಿದ್ದ ಮಹಾದಾಸೆ. ಆದರೆ ಮನೆಯಲ್ಲಿಯ ಕಿತ್ತು ತಿನ್ನುವ ಬಡತನ ಆ ಆಸೆಗಳಿಗೆಲ್ಲ ನೀರೆರಚಿತು. ತನ್ನ 13 ವರ್ಷದಲ್ಲಿಯೇ ಸುಶೀಲಾ ಮುಖಕ್ಕೆ ಬಣ್ಣ ಹಚ್ಚುವ ಪರಿಸ್ಥಿತಿ ಬಂದೊದಗಿತು. ಬಾಲ ನಟಿಯಾಗಿ "ಸಮಾಜ ವಿಕಾಸ ನಾಟ್ಯ ಸಂಘ ದೊಡವಾಡ ಕಂಪನಿ"ಯಲ್ಲಿ ಅಭಿನಯಿಸಲು ಅವಕಾಶವೊದಗಿ ಬಂದಿತು. ಇಲ್ಲಿಂದ ಇವರ ನಟನೆಯ ಜೀವನ ಪ್ರಾರಂಭವಾಯಿತು. ಅವರೇ ಹೇಳಿದ ಹಾಗೆ ಮುಖಕ್ಕೆ ಬಣ್ಣ ಹಚ್ಚಲು ಕಿತ್ತು ತಿನ್ನುವ ಬಡತನವೇ ಕಾರಣ. ಆ ಸಮಯದಲ್ಲಿ ದೊಡವಾಡ ಕಂಪನಿ ನಮ್ಮೂರಿಗೆ ಬಂದಿತ್ತು, ಇದರಲ್ಲಿ ನಟನೆ ಮಾಡು ಚಲೋ ಆಗುತ್ತಾ ಎಂದು ಎಲ್ಲರೂ ಹೇಳಿದರು. ಅದಕ್ಕೆ ನಮ್ಮ ತಾಯಿ ನನ್ನನ್ನು ಬಾಲ ನಟಿಯಾಗಿ ನಟಿಸಲು ಕರೆದುಕೊಂಡು ಹೋಗಿ ರಂಗಭೂಮಿಗೆ ಸೇರಿಸಿದರು. ಮುಂದೆ ನನ್ನ ನಟನೆ ಮೆಚ್ಚಿ ಶ್ರೀ ಸಿದ್ದಲಿಂಗಸ್ವಾಮಿ ಉಜ್ಜೈನಿಮಠ ಇವರು "ನಾನು ನಿನಗೆ ನಟನೆಯನ್ನು ಹೇಳಿಕೊಡುತ್ತೇನೆ. ನೀನು ಅದರಂಗ ಮಾಡು" ಎಂದು ಪ್ರೋತ್ಸಾಹ ಕೊಟ್ಟರು. ನಂತರ ನೀಲಕಂಠಸ್ವಾಮಿ ಯವರ ಜೊತೆ ವಿವಾಹವಾಯಿತು, ಅವರು ಸಹ ಹಾಸ್ಯಕಲಾವಿದರಾಗಿದ್ದರು.

ಜಗಜ್ಯೋತಿ ಬಸವೇಶ್ವರ, ಉಳವಿ ಚನ್ನಬಸವೇಶ್ವರ, ಲಂಕಾ ದಹನ, ಸಂಪೂರ್ಣ ರಾಮಾಯಣ, ರಾಮರಾಜ್ಯ, ಹರಿಶ್ಚಂದ್ರ, ಹೇಮರಡ್ಡಿ ಮಲ್ಲಮ್ಮ, ದಾರಿ ದೀಪ, ಧರ್ಮದೇವತೆ,

ಚಿಕ್ಕ ಸೊಸೆ, ಅರಿಶಿನ ಕುಂಕುಮ, ತವರು ಮನೆ, ಕುಲಪುತ್ರ, ಕೋರವಂಜಿ, ರತ್ನ ಮಾಂಗಲ್ಯ, ಲಮಾಣಿ ಹುಡುಗಿ, ನೀನು ಸಾವಕಾರನಾಗು, ಬಂಜೆ ತೊಟ್ಟಿಲು, ರೈತನ ಮಕ್ಕಳು, ಸಂಗಮ, ಮದನ ಮೋಹನ, ಭಲೇ ಮಗಳು ಮುಂತಾದ 95ಕ್ಕೂ ಹೆಚ್ಚು ನಾಟಕಗಳಲ್ಲಿ ಸಮಾಜ ವಿಕಾಸ ನಾಟ್ಯ ಸಂಘ ದೊಡ್ಡವಾಡ, ಯೋಗಾ ನರಸಿಂಹ ಮೂರ್ತಿ ನಾಟ್ಯ ಸಂಘ, ಜಮಖಂಡಿ, ಗುಡಗೇರಿ ನಾಟಕ ಕಂಪನಿ, ಕಮತಗಿ ನಾಟಕ ಕಂಪನಿ, ಕಡಪಟ್ಟಿ ನಾಟಕ ಕಂಪನಿ, ಪಡೇಸೂರ ನಾಟಕ ಕಂಪನಿ, ಶರಣ ಬಸವೇಶ್ವರ ನಾಟ್ಯ ಸಂಘ ಧಾರವಾಡ, ಅಡವಿ ಸಿದ್ದೇಶ್ವರ ನಾಟ್ಯ ಸಂಘ, ನ್ಯಾಮತಿ, ಮುಂತಾದ ನಾಟಕ ಕಂಪನಿಗಳಲ್ಲಿ ವೈವಿಧ್ಯಮಯವಾದ ಪಾತ್ರಗಳನ್ನು ಮಾಡಿದರು. ಪ್ರಾರಂಭದಲ್ಲಿ ಒಂದು ಪಾತ್ರದ ಅಭಿನಯಕ್ಕೆ ರೂ.4ಗಳು, ಚಹಾಕ್ಕೆ 10 ಪೈಸೆ ವರಮಾನವಾಗಿ ಪಡೆಯುತ್ತಿದ್ದರು. ಮಾದಲಾಂಬಿಕೆ, ಪಾರ್ವತಿ, ಹೇಮರಡ್ಡಿ ಮಲ್ಲಮ್ಮ, ಮಹಾದೇವಿ ಮುಂತಾದ ನಾಯಕಿ ಪಾತ್ರಗಳು, ಸುಬ್ಬಿ, ಹೊಲೆಯರ ಗಂಗಾ, ಶಿವಲೀಲಾ, ರಾಧಾ ಮುಂತಾದ ಹಾಸ್ಯ ಪಾತ್ರಗಳು, ಕಾವೇರಿ, ಶಕುಂತಲಾ ಖಳನಾಯಕಿ ಪಾತ್ರಗಳಲ್ಲಿ ಅಭಿನಯಿಸಲು ಅವಕಾಶ ದೊರೆತದ್ದು ಅತ್ಯಂತ ಖುಷಿ ತಂದಿದೆ ಎಂದು ಹೇಳಿಕೊಂಡಿದ್ದಾರೆ. ಶಿಶುನಾಳ ಶರೀಫ, ಮೂಕರಾಗ, ಮಂದಾರ, ಅಣ್ಣ ಬಸವಣ್ಣ ಕಿರುಚಿತ್ರಗಳಲ್ಲಿಯೂ ಅಭಿನಯಿಸಿ ಸೈಯೆನಿಸಿಕೊಂಡಿದ್ದಾರೆ.

ಇವರ ಅಭಿನಯಕ್ಕೆ ರಂಗಕಲಾವಿದೆ ಪ್ರಶಸ್ತಿ, ಪುರಸ್ಕಾರ ಪಡೆದಿದ್ದಾರೆ, ಅಲ್ಲದೆ ಸಾಕಷ್ಟು ಕಂಪನಿಗಳಿಂದ ಸನ್ಮಾನಗಳು ಗೌರವ ಅರಸಿಕೊಂಡು ಬಂದಿವೆ. ಇವತ್ತಿನ ಕಲಾವಿದರು ಒಳ್ಳೆಯ ಪಾತ್ರಗಳನ್ನು ಮಾಡಿ ನಾಟಕದ ಬಗ್ಗೆ ಉತ್ತಮ ಅಭಿಪ್ರಾಯಗಳನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸಬೇಕು. ಇದರಿಂದ ಕಲಾವಿದರಿಗೆ ಗೌರವ ಸಿಗಲು ಸಾಧ್ಯ, ಹಾಗೂ ಪ್ರೇಕ್ಷಕರು, ನಾಟಕ ಅಭಿಮಾನಿಗಳು ಕಲಾವಿದರನ್ನು ಹಾಗೂ ಕಲೆಯನ್ನು ಪ್ರೋತ್ಸಾಹಿಸಿ ಬೆಳೆಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಉಮಾದೇವಿ ಹಿರೇಮಠ: 01-01-1955ರಲ್ಲಿ ಗದಗನಲ್ಲಿ ಜನಿಸಿದರು, ತಂದೆ ಶ್ರೀನಿವಾಸ ಮೂರ್ತಿ, ತಾಯಿ ಜಯಮ್ಮ, ಪತಿ ವೀರಯ್ಯ ಹಿರೇಮಠ. ತಂದೆ ತಾಯಿ ಕಲಾವಿದರಾಗಿದ್ದರೂ ಅವತ್ತಿನ ಆದಾಯವು ಅಷ್ಟಕ್ಕಷ್ಟೇ ಇತ್ತು. ಹಸಿವನ್ನು ತಾಳಲಾರದೇ ಬೇರೆಯವರ ಮನೆಯ ಕಸ, ಮುಸುರಿಯನ್ನು ತೆಗೆದು ಹೊಟ್ಟೆ ತುಂಬಿಸಿಕೊಳ್ಳುವ ಪರಿಸ್ಥಿತಿ ಇವರದ್ದಾಗಿತ್ತು. ಇದರಿಂದ ಬೇಸತ್ತ ಉಮಾರವರು ನಟನೆ ಮಾಡುವದರಿಂದಾದರೂ ಹಸಿವನ್ನು ನೀಗಿಸಿಕೊಳ್ಳಬಹುದೆಂದು ಭಾವಿಸಿ ರಂಗಭೂಮಿಯನ್ನು ಪ್ರವೇಶಮಾಡಿದರು. ಇವರು ರೈತನ ಮಕ್ಕಳು, ತಾಯಿ ಕರುಳು, ದುಡ್ಡಿನ ದರ್ಪ, ವಿಧಿಯ ಕೈವಾಡ ಮುಂತಾದ 60ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ನಾಯಕಿ, ಖಳನಾಯಕಿ, ಹಾಸ್ಯಪಾತ್ರ, ಗಂಡುಪಾತ್ರ, ಪೋಷಕ ಪಾತ್ರಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿ ಪ್ರಸಿದ್ಧ ಕಲಾವಿದರೆಂದು ಕೀರ್ತಿ ಪಡೆದಿದ್ದಾರೆ. ವಿಪರ್ಯಾಸವೇನೆಂದರೆ ಮಕ್ಕಳಿಲ್ಲದ ಉಮಾದೇವಿ ಗಂಡ ತೀರಿ ಹೋದ ಮೇಲೆ ಯಾರ ಆಶ್ರಯವಿಲ್ಲದೆ ಆಶ್ರಮಗಳಲ್ಲಿ ಜೀವನ ಮಾಡಬೇಕಾದುದು ವಿಷಾದನೀಯ ಸಂಗತಿಯಾಗಿದೆ.

ಗಾಯತ್ರಿ ಹಿರೇಮಠ: 01-01-1959 ರಲ್ಲಿ ಗದಗನಲ್ಲಿ ಜನಿಸಿದರು. ತಂದೆ ಲಕ್ಷ್ಮಣ ಶೆಟ್ಟರ, ತಾಯಿ ರತ್ನಾಭಾಯಿ, ಪತಿ ಸಂಗಮೇಶ ಹಿರೇಮಠ. ತಂದೆ ತಾಯಿ ಇಬ್ಬರೂ ಕಲಾವಿದರಾಗಿದ್ದರಿಂದ ಹುಟ್ಟಿನಿಂದಲೇ ಅಭಿನಯ ಕಲೆ ಗಾಯತ್ರಿಯವರಲ್ಲಿ ರಕ್ತಗತವಾಗಿ ಬಂದಿತ್ತು. ತಂದೆ ನಟಿಸುತ್ತಿದ್ದ ನಾಟಕಗಳನ್ನು ನೋಡುತ್ತಾ ಪ್ರೇರಣೆಗೊಂಡು ತಾಯಿಯ ಪ್ರೋತ್ಸಾಹ ಪಡೆದು ಬಾಲನಟಿಯಾಗಿ ತಾನೂ ಒಬ್ಬ ಶ್ರೇಷ್ಠ ನಟಿಯಾಗಬೇಕೆಂಬ

ಆಸೆಯಿಟ್ಟುಕೊಂಡು ಗಾಯತ್ರಿ ರಂಗಪ್ರವೇಶ ಮಾಡಿದರು. ಬಾಲನಟಿಯಾಗಿ, ಮಲ್ಲಮ್ಮನ ಅತ್ತೆಯ ಪಾತ್ರ, ನಾಯಕಿ ಪಾತ್ರ, ಖಳನಾಯಕಿ ಪಾತ್ರ ಹೀಗೆ ಸುಮಾರು 100ಕ್ಕೂ ಹೆಚ್ಚು ನಾಟಕಗಳಲ್ಲಿ ನಟಿಸಿದ್ದಾರೆ. ತಂದೆಯ ಮರಣವು ನನಗೆ ತುಂಬಾ ದುಃಖವನ್ನು ತಂದಿತು. ತಂದೆ ಇಲ್ಲದೆ ಮುಂದೆ ಜೀವನ ಹೇಗೆ ಎಂಬ ಪ್ರಶ್ನೆ ಎದುರಾದಾಗ ಸಂಗಮೇಶರವರ ಪರಿಚಯವಾಗಿ ವಿವಾಹವಾಯಿತು. ಸಂಸಾರ ಜೀವನವು ಸುಖಮಯವಾಗಿರುತ್ತದೆ ಎಂದುಕೊಂಡಾಗಲೇ ಅದು ಮತ್ತಷ್ಟು ಕಷ್ಟದ ಕೂಪಕ್ಕೆ ತಳ್ಳಿತು. ಏಕೆಂದರೆ ಗಂಡ ದಿನಾಲು ಕುಡಿದುಕೊಂಡು ಬಂದು ಹೆಂಡತಿ ಮಕ್ಕಳನ್ನು ಹೊಡೆಯುವದರಿಂದ ಮಾನಸಿಕ ಮತ್ತು ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿತು. ಈ ಸಂದರ್ಭದಲ್ಲಿ ಬಣ್ಣದ ಬದುಕು ಒಂದು ತುತ್ತು ಅನ್ನಕ್ಕೆ ದಾರಿತೋರಿದ ದೇವರಾಯಿತು. ಗುಡಗೇರಿ ಕಂಪನಿ, ಚಿತ್ತರಗಿ ಕಂಪನಿ, ಸಂಗಮೇಶ ನಾಟ್ಯ ಸಂಘ, ದೊಡವಾಡ, ಕಲ್ಲೂರ ಕಂಪನಿ ಹೀಗೆ 25ಕ್ಕೂ ಹೆಚ್ಚು ಕಂಪನಿಗಳಲ್ಲಿ ನಾಯಕಿಯಾಗಿ, ಖಳನಾಯಕಿಯಾಗಿ, ಹಾಸ್ಯನಟಿಯಾಗಿ ಹಾಗೂ ಪುರುಷ ಪಾತ್ರವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ ಗಾಯತ್ರಿಯವರು ನಾ ಅದಿನಿ, ಕಾಲ್ಮಿ, ಹಂಚಿಕೊಂಡವರು ಇನ್ನೂ ಮುಂತಾದ ಕಿರುಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇವರು ಪ್ರತಿಭಾವಂತ ನಟಿಯಾಗಿದ್ದರೂ ಸಹ ನಾಟಕಗಳಲ್ಲಿ ಪಾತ್ರ ಮಾಡುವ ಅವಕಾಶ ಸಿಕ್ಕಾಗ ಮಾತ್ರ ಸಂಭಾವನೆ ಸಿಕ್ಕುತ್ತಿತ್ತು, ನಾಟಕದಲ್ಲಿ ಪಾತ್ರದ ಅವಕಾಶ ಇಲ್ಲದಿದ್ದಾಗ ಒಂದು ಹೊತ್ತಿನ ಊಟಕ್ಕೂ ಕಷ್ಟವಾಗುತ್ತಿತ್ತು. ಒಮ್ಮೊಮ್ಮೆ ಬಸ್ ನಿಲ್ದಾಣ, ದೇವಾಲಯಗಳ ಮುಂದೆ ಮಕ್ಕಳೊಂದಿಗೆ ನಿಂತು ಕಲಾ ಪ್ರದರ್ಶನ ಮಾಡಿ ಜನರಿಂದ ಹಣ ಬೇಡಿದ ಪ್ರಸಂಗಗಳನ್ನು ಹೇಳಿದ್ದನ್ನು ಕೇಳುತ್ತಿದ್ದರೆ ಬಹಳ ನೋವೆನಿಸುತ್ತದೆ. (ಮಾಹಿತಿ: ಗಾಯತ್ರಿಯವರೊಂದಿಗೆ ನಡೆಸಿದ ಸಂದರ್ಶನ ಸಂದರ್ಭದಲ್ಲಿನ ಅವರ ಅಭಿಪ್ರಾಯಗಳು)

ಮಂಜುಳಾ ಹಿರೇಮಠ: 05-11-1963ರಲ್ಲಿ ದಾವಣಗೆರೆಯಲ್ಲಿ ಜನನ, ತಂದೆ ನೀಲಕಂಠಯ್ಯಸ್ವಾಮಿ ಹಿರೇಮಠ, ತಾಯಿ ಸುಶೀಲಾ, ಪತಿ ಅಶೋಕ, ಕಲಾವಿದರು ಹಾಗೂ ಕವಿಗಳು. ಹಿರಿಯ ಕಲಾವಿದೆಯಾದ ಸುಶೀಲಮ್ಮನ ಮಗಳು ಮಂಜುಳಾ. ಇವರು ಬಡತನದ ಬೇಗೆಯನ್ನು ನಿವಾರಿಸುವದಕ್ಕಾಗಿ ಮುಖಕ್ಕೆ ಬಣ್ಣ ಹಚ್ಚಲು ನಿರ್ಧರಿಸಿದರು. ತಾಯಿ ಸುಶೀಲಮ್ಮನವರು ತಮ್ಮ ಮಗಳು ಬಾಲನಟಿಯಾಗಿ ರಂಗಪ್ರವೇಶ ಮಾಡಲು ಕಾರಣರಾದರು. ತಂದೆ ತಾಯಿಗೆ ಮಕ್ಕಳ ಪೋಷಣೆ, ಆರೈಕೆ ಮೂರು ಹೊತ್ತಿನ ಊಟದ ಹೊರೆ ಅತ್ಯಂತ ಕಷ್ಟಕರವಾಯಿತು. ಆದುದರಿಂದ ಇವರು ನಟಿಯಾಗಿ ಪ್ರವೇಶ ಮಾಡುವುದು ಅನಿವಾರ್ಯವಾಯಿತು. ಸತ್ಯಹರಿಶ್ಚಂದ್ರ, ದುಡ್ಡಿನ ದರ್ಪ, ರೈತನ ಕೆರೆ, ರೈತನ ಮಕ್ಕಳು ಮುಂತಾದ ನಾಟಕಗಳ ವರಮಾನವು ಅವರ ಜೀವನವನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಲು ಅನುಕೂಲವಾಯಿತು. ಇವರು ಗಂಡು ಪಾತ್ರ ಸೇರಿದಂತೆ ಪ್ರತಿಯೊಂದು ಪಾತ್ರಕ್ಕೂ ಜೀವ ತುಂಬುವ ಅಭಿನಯ ಕಲೆ ಇವರಿಗೆ ಸಿದ್ಧಿಸಿತ್ತು. ಗುಡಗೇರಿ ಕಂಪನಿ ಸೇರಿದಂತೆ ಬೇರೆ ಬೇರೆ ಕಂಪನಿಗಳು ಹಾಗೂ ಹಳ್ಳಿ ಹಳ್ಳಿಗೆ ಹೋಗಿ ನಾಟಕಗಳಲ್ಲಿ ಅಭಿನಯಿಸಿ ಪ್ರಖ್ಯಾತ ಕಲಾವಿದೆಯಾಗಿ ಹೆಸರು ಮಾಡಿದರು. ಹಸಿದ ಹೆಬ್ಬುಲಿ, ಮುದುಡಿದ ತಾವರೆ ಅರಳಿತು, ಸುಳಿಗಾಳಿ, ಪ್ರೇಮವೇ ಬಾಳಿನ ಬೆಳಕು ಮುಂತಾದ ಸಿನಿಮಾಗಳಲ್ಲಿಯೂ ಸಹ ನಟಿಯಾಗಿ ಅಭಿನಯಿಸಿದ್ದಾರೆ.

ಎನ್.ಮಂಜಮ್ಮ: 07-06-1964ರಲ್ಲಿ ದಾವಣಗೆರೆಯಲ್ಲಿ ಜನಿಸಿದರು, ತಂದೆ ಹುಚ್ಚಪ್ಪ ಗುಳೇದಗುಡ್ಡ, ತಾಯಿ ಬಸಮ್ಮ, 4ನೇ ತರಗತಿಯವರೆಗೆ ಅಭ್ಯಾಸ ಮಾಡಿದರು, ಪತಿ ಗುಬ್ಬಿ ವೀರಣ್ಣನವರ ಮೊಮ್ಮಗ ಹಾಗೂ ಕಲಾವಿದರಾದ ನಾಗೇಶ, ಎನ್.ಮಂಜಮ್ಮ

ಅವರದ್ದು ವಂಶಪಾರಂಪರ್ಯವಾಗಿ ಬಂದ ಕಲೆಯಾಗಿದೆ. ತಾಯಿಯೇ ಅವರ ಮೊದಲ ಗುರುವಾಗಿ ನಿಲ್ಲುತ್ತಾರೆ. ತಂದೆ ಹಾಗೂ ಯಲಿವಾಳ ಸಿದ್ದಯ್ಯಸ್ವಾಮಿಯ ಕೃಷ್ಣನ ಪಾತ್ರದ ಪ್ರಭಾವದಿಂದ ತಾನೂ ಒಬ್ಬ ರಂಗನಟಿಯಾಗಲು ಪ್ರೇರಣೆಯಾಯಿತು ಎಂದು ಅವರು ಹೇಳುತ್ತಾರೆ. ಗುಬ್ಬಿ ವೀರಣ್ಣ ಕಂಪನಿ, ನ್ಯಾಮತಿ ಶಾಂತಪ್ಪ ಕಂಪನಿ, ಗುಡಗೇರಿ ಕಂಪನಿ, ಕಮತಗಿ ಕಂಪನಿ, ಜೇವರ್ಗಿ ಕಂಪನಿ, ಚನ್ನಬಸವೇಶ್ವರ ನಾಟ್ಯ ಸಂಘ ಮುಂತಾದ ನಾಟಕ ಕಂಪನಿಗಳಲ್ಲಿ ನಾಯಕಿಯಾಗಿ, ಖಳನಾಯಕಿಯಾಗಿ, ಹಾಸ್ಯನಟಿಯಾಗಿ, ಪೋಷಕ ಪಾತ್ರಧಾರಿಯಾಗಿ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಆಗ ಅವರಿಗೆ ತಿಂಗಳಿಗೆ 400 ರೂ. ಸಂಭಾವನೆ ಸಿಗುತ್ತಿತ್ತು. ಈಗ ಒಂದು ಪಾತ್ರದ ಅಭಿನಯಕ್ಕೆ 1000 ರುಪಾಯಿಗಳವರೆಗೂ ತೆಗೆದುಕೊಳ್ಳುವ ಮಂಜಮ್ಮನವರು ನಾಟಕದ ಬಗ್ಗೆ ಅಭಿಮಾನವನ್ನು ಹೊಂದಿದ್ದಾರೆ. ಆದರೆ ನಾಟಕ ನಡೆಯುವ ಸಂದರ್ಭದಲ್ಲಿಯೇ ತಂದೆಯ ಸಾವು ಬಹಳ ದುಃಖವನ್ನು ತಂದಿತು. ಅದು ಮರೆಯಲಾರದ ಘಟನೆಯಾಗಿದೆ ಎಂದು ಹೇಳುತ್ತಾರೆ. ತಂದೆಯ ಸಾವಿನ ನಂತರದ ಜೀವನವು ಅತ್ಯಂತ ಕಷ್ಟಗಳ ಗೂಡಾಯಿತು, ಅನೇಕ ಸಮಸ್ಯೆ ಸವಾಲುಗಳು ಎದುರಾದವು. ಆದರೂ ಛಲ ಬಿಡದೆ ಮೈಗೂಡಿಸಿಕೊಂಡ ಅಭಿನಯ ಕಲೆಯನ್ನು ಬಿಡದೇ ಇಂದಿಗೂ ಪೋಷಕ ಪಾತ್ರಗಳಲ್ಲಿ ಅಭಿನಯಿಸಿಕೊಂಡು ಬರುತ್ತಿದ್ದಾರೆ. ಪ್ರತಿಯೊಂದು ಪಾತ್ರಕ್ಕೂ ಜೀವ ತುಂಬುವ ಮಂಜಮ್ಮನವರು ಕಾಲ ಕಾಲಕ್ಕೆ ಆಗುವ ಬದಲಾವಣೆಯನ್ನು ಒಪ್ಪಿಕೊಳ್ಳುತ್ತಾರೆ. ಲವ-ಕುಶ, ಸಿದ್ದೇಶ್ವರ ಮಹಾತ್ಮೆ, ಶ್ರೀನಿವಾಸ ಕಲ್ಯಾಣ, ಅಣ್ಣ-ತಮ್ಮ, ತಾಯಿ ಕರುಳು, ಕೊಂಡು ತಂದ ಗಂಡ, ಕುಂಟ ಕೋಣ-ಮೂಕ ಜಾಣ, ಧರ್ಮದೇವತೆ, ಸತ್ಯಹರಿಶ್ಚಂದ್ರ, ಕೈಲಾಗದ ಗಂಡ ಕೈಲಾಸ ಕಂಡ ಮುಂತಾದ ನಾಟಕಗಳಲ್ಲಿ ಇವರು ಸಮರ್ಥವಾಗಿ ಅಭಿನಯಿಸಿದ್ದಾರೆ.

ಹಲೋ ಡ್ಯಾಡಿ (ಕ್ಲರ್ಕ ಪಾತ್ರ), ನವಭಾರತ (ಡಾಕ್ಟರ್ ಹೆಂಡತಿ) ಸಿನಿಮಾಗಳಲ್ಲಿ ನಟಿಸಿದ್ದಾರೆ. ಉತ್ತಮ ಕಲಾವಿದರು ರಂಗಭೂಮಿಗೆ ಬರಬೇಕು. ಕಲಾವಿದರು ಬೆಳೆಯಬೇಕೆಂದರೆ ಜನರು ಹೆಚ್ಚು ಹೆಚ್ಚು ನಾಟಕಗಳನ್ನು ನೋಡಬೇಕು. ಅವರಿಗೂ ಗೌರವ ಪ್ರೋತ್ಸಾಹಗಳು ಸಿಗಬೇಕು ಎನ್ನುವದು ಮಂಜಮ್ಮನವರ ಕಳಕಳಿಯಾಗಿದೆ.

ರಂಗಭೂಮಿ ಹಲವು ಲಲಿತ ಕಲೆಗಳ ಸವಿ ರಸಾಯನದ ಒಟ್ಟು ರೂಪವೇ ನಾಟಕ, ನಾಟಕದಲ್ಲಿ ನವರಸಗಳ ಸಮ್ಮೇಳನ ಎರಕಹೊಯ್ದು ಪ್ರೇಕ್ಷಕರ ಮನಸ್ಸನ್ನು ಮುದಗೊಳಿಸುವಂತಿರಬೇಕು. ಸಂಭಾಷಣೆ, ಹಾಡು, ಕುಣಿತ, ಹಾವಭಾವ ಇವೆಲ್ಲವೂ ಪ್ರೇಕ್ಷಕರನ್ನು ರಂಜಿಸುವದರ ಜೊತೆಗೆ ಅರಿವನ್ನುಂಟು ಮಾಡಬೇಕು. ನಾಟಕವು ದೃಕ್ ಶ್ರವಣೋಪಕರಣದ ಮಾಧ್ಯಮವಾಗಿದೆ. ಅರ್ಥವತ್ತಾದ ಕಥೆಯು ರಂಗಭೂಮಿಯನ್ನು ಉತ್ತಮವಾದ ಪರಿಣಾಮದೊಂದಿಗೆ ಪ್ರತಿಫಲಿಸುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಗದಗ ಪರಿಸರವು ಸಾಹಿತ್ಯ, ಸಂಸ್ಕೃತಿ, ಸಂಗೀತ, ಸೌಹಾರ್ದತೆ, ಸಹೋದರತೆ, ಸಹಕಾರ, ಸಮನ್ವಯಗಳ ನೆಲೆವೀಡಾಗಿದೆ. ಪ್ರಾಚೀನ ಕಾಲದಿಂದಲೂ ಈ ಪರಿಸರವು ಕನ್ನಡ ನಾಡು, ನುಡಿಗೆ, ಭಾರತೀಯ ಸಂಸ್ಕೃತಿಗೆ ವಿಶೇಷವಾದ ಕೊಡುಗೆಯನ್ನು ನೀಡಿದೆ. ಅದೇ ತೆರನಾಗಿ ವೃತ್ತಿರಂಗಭೂಮಿಗೆ ಗದಗ ಪರಿಸರ ಕೊಡುಗೆ ಅಮೂಲ್ಯವಾದುದು ಮತ್ತು ಮೌಲ್ಯಯುತವಾದುದು.

**ಪರಾಮರ್ಶನ ಗ್ರಂಥಗಳು:**

1. ರವೀಂದ್ರ ಆರ್. ಕೊಪ್ಪರ್, ಗದಗ ಜಿಲ್ಲಾ ರಂಗಮಾಹಿತಿ.
2. ರಂಗನಾಥ ಎಚ್. ಕೆ., (1978), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ ಪ್ರಕಾಶನ.
3. ಕಲಬುರ್ಗಿ ಎಂ. ಎಂ. (ಸಂ.), ಏಣಗಿ ಬಾಳಪ್ಪನವರ ಜೀವನ ಮತ್ತು ಸಾಧನೆ ಭಾಗ-1 ಮತ್ತು ಭಾಗ-2,
4. ಶೇಷಗಿರಿರಾವ್ ಎಲ್. ಎಸ್., (2013), ಗ್ರೀಕ್ ರಂಗಭೂಮಿ (ಮತ್ತು ನಾಟಕ), ಬೆಂಗಳೂರು: ಸಪ್ನ ಬುಕ್ ಹೌಸ್.
5. ಅಶೋಕ ಟಿ. ಪಿ. (ಸಂ.), ಶ್ರೀರಂಗ ಸಂಪುಟ-1, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಮರುಳಸಿದ್ದಪ್ಪ, ಆಧುನಿಕ ಕನ್ನಡ ರಂಗಭೂಮಿ.
7. ಪ್ರಕಾಶ ಗರುಡ, ಕಂಪನಿ ನಾಟಕ ಅರ್ಥಾತ್ ವೃತ್ತಿರಂಗಭೂಮಿ, ಯಾಜಿ ಪ್ರಕಾಶನ.
8. ವೈಕುಂಠರಾಜು ಬಿ. ವಿ., (1997), ಕನ್ನಡ ರಂಗಭೂಮಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ಶಿವಮೂರ್ತೆಪ್ಪ ಕುರೇರ್ (ಸಂ.), ಸಮೂಹ ಮಾಧ್ಯಮಗಳು ಮತ್ತು ರಂಗಭೂಮಿ.